International Journal of Kannada Research
www.kannadajournal.com

ISSN: 2454–5813
IJKR 2020; 6(4): 96-102
© 2020 IJKR
www.kannadajournal.com
Received: 11-08-2020
Accepted: 15-09-2020

**Dr. NR Chandregowda**
Assistant Professor,
Department of Studies and Research in Kannada.
Karnataka State Open University, Mysuru, Karnataka, India

**Corresponding Author:**
**Dr. NR Chandregowda**
Assistant Professor,
Department of Studies and Research in Kannada.
Karnataka State Open University, Mysuru, Karnataka, India

# ಸ್ತ್ರೀ ಸಂವೇದನೆಯ ಶೋಧ: ತೇಲಾಡುವ ಮೋಡಗಳು

**Dr. NR Chandregowda**

ಸಾರಅಬೂಬಕ್ಕರ್ ಅವರು ಕರ್ನಾಟಕದ ಕರಾವಳಿ ಪ್ರದೇಶದ ಜನಜೀವನವನ್ನು ಚೆನ್ನಾಗಿ ಬಲ್ಲವರು. ಇವರು ಬರೆದಿರುವ ಸಾಹಿತ್ಯ ಕೃತಿಗಳಲ್ಲಿ ಸ್ತ್ರೀಸಂವೇದನೆಯ ವಿಷಯಗಳು ವೈಚಾರಿಕ ನೆಲೆಗಟ್ಟಿನಲ್ಲಿ ಪ್ರತಿಬಿಂಬಿತವಾಗಿವೆ. ಈವತ್ತಿನ ದಿನಮಾನಗಳಲ್ಲಿ ಜನರು ಶಿಕ್ಷಿತರಾಗಿದ್ದರೂ ಕೂಡ ಸ್ತ್ರೀಯರ ಮೇಲೆ ನಾನಾ ರೀತಿಯ ಶೋಷಣೆ, ಲೈಂಗಿಕ ದೌರ್ಜನ್ಯಗಳು ನಡೆಯುತ್ತಿರುವುದು ಶೋಚನೀಯ. ಮನುಷ್ಯ ಸುಶಿಕ್ಷಿತನಾದಂತೆ ಕ್ರೂರವಾಗಿ ವರ್ತಿಸುತ್ತಿರುವ ಘಟನೆಗಳನ್ನು ದೃಶ್ಯಮಾಧ್ಯಮ, ಪತ್ರಿಕಾಮಾಧ್ಯಮ ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಗಮನಿಸುತ್ತಿದ್ದೇವೆ. ಹಾಗೆಯೇ ನಮ್ಮ ಕಣ್ಮುಂದೆಯೂ ಇಂತಹ ಹಲವಾರು ಸ್ತ್ರೀಯರ ಸಮಸ್ಯೆಗಳನ್ನು ವೀಕ್ಷಿಸುತ್ತಿದ್ದೇವೆ. ಕೌಟುಂಬಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಮಹಿಳೆಯರ ಮೇಲೆ ನಾನಾ ರೀತಿಯ ಶೋಷಣೆಗಳು ನಡೆಯುತ್ತಿರುವ ಜ್ವಲಂತ ಸಮಸ್ಯೆಗಳನ್ನು ತಮ್ಮ ಬರಹದಲ್ಲಿ ಬಹಳ ಸೂಕ್ಷ್ಮವಾಗಿ ವ್ಯಕ್ತಪಡಿಸಿ ಸಮಾಜವನ್ನು ಎಚ್ಚರಿಸುತ್ತಿದ್ದಾರೆ.

‘ತೇಲಾಡುವ ಮೋಡಗಳು’ ಶೀರ್ಷಿಕೆಯನ್ನೊಳಗೊಂಡ ಕೃತಿಯಲ್ಲಿ ಏಳು ನಾಟಕ ಭಾಗಗಳು ಇವೆ. ಒಂದೊಂದು ನಾಟಕದ ಕಥಾವಸ್ತು ಸಮಾಜದಲ್ಲಿ ಕೌಟುಂಬಿಕ ಬದುಕಿನ ಚಿತ್ರಣ, ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನಗಳು, ಪುರುಷರ ಧೋರಣೆಗಳು, ಹೆಣ್ಣಿನ ಅಸಹಾಯಕತೆ –ಇವುಗಳ ನಡುವೆ ‘ಹೆಣ್ಣು ಸಂಸಾರದ ಕಣ್ಣು’ ಎಂಬಂತೆ ಕುಟುಂಬದ ಮತ್ತು ಸಮಾಜದ ಕಣ್ಣು ತೆರೆಸುವಳಾಗಿ ದಾರಿದೀಪವಾಗುತ್ತಾಳೆ. ಇವೆಲ್ಲ ಮನುಷ್ಯತ್ವದ ನೆಲಗಟ್ಟಿನಲ್ಲಿ ಈ ಕೃತಿಯಲ್ಲಿ ರಚನೆಯಾಗಿವೆ. ಅನಾಗರಿಕವಾಗಿ ವರ್ತಿಸುವ ಮನುಷ್ಯರನ್ನು ನಿಜವಾದ ಮನುಷ್ಯರನ್ನಾಗಿ ಮಾಡುವುದಕ್ಕೆ ಮಹಿಳೆ ತನ್ನ ಜೀವನದುದ್ದಕ್ಕೂ ಪಡುವ ಪಾಡು ಅಷ್ಟಿಷ್ಟಲ್ಲ. ಮಾಗಿದ ಹಣ್ಣಿನಂತೆ ಹೆಣ್ಣು ಸಮಾಜದಲ್ಲಿ ಕಂಡುಬರುತ್ತಾಳೆ. ‘ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ; ತಾಯಿಯೇ ಮೊದಲ ಗುರು’ ಎಂಬ ಮಾತಿನಂತೆ ಹೆಣ್ಣು–ಮಕ್ಕಳಿಗೆ ತಾಯಿಯಾಗಿ, ಗಂಡನಿಗೆ ಹೆಂಡತಿಯಾಗಿ, ಅತ್ತೆಮಾವ, ಹಿರಿಯರಿಗೆ ಮಗಳಾಗಿ ಸಮಾಜಕ್ಕೆ ಶಕ್ತಿಯಾಗಿ ಬದುಕುವ ರೀತಿ ನೀತಿಗಳು ಮಾನವಕುಲದ ಬೆಳವಣಿಗೆಗೆ ರೂವಾರಿಯಾಗಿದ್ದಾಳೆ. ಇವೆಲ್ಲದರ ಸಿಹಿ–ಕಹಿ ಅನುಭವಗಳನ್ನು ಸಮಾನವಾಗಿ ಸ್ವೀಕರಿಸಿ ಬದುಕಿನಲ್ಲಿ ತೋರಿಸುವ ಆತ್ಮಸ್ಥೈರ್ಯ ಮೆಚ್ಚುವಂತದ್ದೆ. ಇವತ್ತಿನ ದಿನಮಾನಗಳಲ್ಲಿ ಹೆಣ್ಣು ದಿಟ್ಟಮನಸ್ಸಿನಿಂದ ಇಡುವ ಹೆಜ್ಜೆ ನಿಜವಾಗಿಯೂ ಸಮಾಜಮುಖಿಯಾಗಿರುತ್ತದೆ ಎಂಬುದನ್ನು ತಮ್ಮ ಕೃತಿಯಲ್ಲಿ ಬಹಳ ತೀಕ್ಷ್ಣವಾಗಿ ವ್ಯಕ್ತಪಡಿಸಿದ್ದಾರೆ.

‘ತೇಲಾಡುವ ಮೋಡಗಳು’ ನಾಟಕದಲ್ಲಿ ಪ್ರಮುಖವಾಗಿ ಸೆಲ್ಮಾ, ಹಮೀದ್, ಜಮೀಲಾ ಆರಿಫ್, ಚಿಕ್ಕಮ್ಮ– ಈ ಪಾತ್ರಗಳು ಬರುತ್ತವೆ. ಇಸ್ಲಾಂ ಧರ್ಮದ ನೆಲೆಯಲ್ಲಿ ಬದುಕುವ ಈ ಕುಟುಂಬವಾದರೂ ಸಾಮಾಜಿಕ ವೈರುಧ್ಯಗಳು ಹೇಗೆ ಪ್ರತಿ ಬಿಂಬತವಾಗಿದೆ ಎಂಬುದು ಗಮನಾರ್ಹ. ಈ ಕುಟುಂಬದಲ್ಲಿ ಹಿರಿಯ ತಲೆಮಾರಿನವರಾದ ಹಮೀದ್‌ನ ತಾಯಿಯನ್ನು ಸಾಂಕೇತಿವಾಗಿ ಬಳಸಿಕೊಂಡು ಆಯಾಯ ಸಂದರ್ಭಕ್ಕೆ ತಕ್ಕಂತೆ ಹೆಣ್ಣುಮಕ್ಕಳು ಕಡ್ಡಾಯವಾಗಿ ಬುರ್ಕಾ ಧರಿಸಬೇಕು, ಹೆಚ್ಚು ಓದಬಾರದು ಎಂದು ತಾಕೀತು ಹಾಕುವುದು, ಇನ್ನೊಂದೆಡೆ ಹಮೀದ್ ಮತ್ತು ಸೆಲ್ಮಾ ದಾಂಪತ್ಯ ಜೀವನದಲ್ಲಿ ಸರಳವಾಗಿ ಬದುಕಿ ಸಂತೋಷಪಡುವುದಕ್ಕಿಂತ, ಆಧುನಿಕ ಬದುಕಿಗೆ ತಕ್ಕಂತೆ ಶ್ರೀಮಂತಿಕೆಯಿಂದ ಬದುಕಬೇಕೆನ್ನುವ ಗಂಡನ ಮನಸ್ಥಿತಿ ಹಣದ ವ್ಯಾಮೋಹಕ್ಕೆ ಆಕರ್ಷಿತನಾಗಿ ತನ್ನ ಹೆಂಡತಿಯನ್ನು ಜೀವನದುದ್ದಕ್ಕೂ ಹೀಯಾಳಿಸುವ, ಹಂಗಿಸುವ ಸಂದರ್ಭ ಶೋಚನೀಯವಾದುದು. ತವರು ಮನೆಯ ಚಿಕ್ಕಮ್ಮನ ಮಗಳು ಜಮೀಲಾ, ಸೆಲ್ಮಾಳ ತಂಗಿ, ಪಿ.ಯು.ಸಿ. ನಂತರ ಪದವಿ ವ್ಯಾಸಂಗಕ್ಕೆ ಹಮೀದ್ ಮನೆಗೆ ಬಂದಾಗ ಹೆಣ್ಣು ಎನ್ನುವ ಒಂದು ಕಾರಣ, ಇನೊಂದು ಹಮೀದ್‌ನ ತಮ್ಮ ಆರೀಫ್ ಉಪನ್ಯಾಸಕ ವೃತ್ತಿಯಲ್ಲಿರುವವನು ಎಲ್ಲಿ ದಾರಿ ತಪ್ಪಿಯಾನು ಎನ್ನುವ ಆತಂಕ,

ಇವರಿಬ್ಬರೂ ಮದುವೆಯಾದರೆ ವರದಕ್ಷಿಣೆ ಎಲ್ಲಿ ತಪ್ಪಿ ಹೋಗಬಹುದು ಎಂಬ ನಿರುತ್ಸಾಹ ಹಮೀದ್‌ನದಾಗಿರುತ್ತದೆ. ಇಲ್ಲಿ ಹಮೀದ್ ತನ್ನ ಬದುಕನ್ನು ಮನುಷ್ಯನಾಗಿ ನೋಡದೆ ಹಣದ ವ್ಯಾಮೋಹದ ದೃಷ್ಟಿಯಿಂದ ಕಾಣುತ್ತಾನೆ. ಆರಿಫ್ ಪ್ರಾಯದವನಾದ್ದರಿಂದ ಆ ವಯೋಮಾನಕ್ಕೆ ತಕ್ಕಂತೆ ಆಸೆ ಆಕಾಂಕ್ಷೆಗಳು ಸಾಕಷ್ಟಿರುತ್ತವೆ. ಜಮೀಲಾಳ ಜೊತೆಗೂಡಿ ಸಂತೋಷದ ಮಾತುಗಳನ್ನು ಹಂಚಿಕೊಳ್ಳುವುದು, ಮದುವೆಯಾಗುವುದಕ್ಕೂ ತನ್ನ ಅತ್ತಿಗೆಯ ಜೊತೆ ಪ್ರಸ್ತಾಪಿಸುವುದು ಕಂಡು ಬರುತ್ತದೆ. ಆದರೆ ಇವರ ಕುಟುಂಬದವರ ಮನಸ್ಥಿತಿಯನ್ನರಿತ ಸೆಲ್ಮಾ ನಿರಾಕರಿಸಿಸುವುದು ತಿಳಿಯುತ್ತದೆ. ಆರಿಫ್ ಮಾತ್ರ ಜಮೀಲಾಳನ್ನೇ ಮದುವೆಯಾಗುವುದು ಎಂದು ಭರವಸೆ ನೀಡುತ್ತಾನೆ. ಇದಾದ ಅನಂತರ ತನ್ನ ಅಣ್ಣ ಮತ್ತು ತಾಯಿಯ ಜೊತೆ ಶ್ರೀಮಂತ ವ್ಯಕ್ತಿ ರೆಹಮಾನ್ ಹಾಜಿಯವರ ಮನೆಗೆ ಹೆಣ್ಣು ನೋಡುವುದಕ್ಕೆ ಹೊಗುತ್ತಾನೆ ಮದುವೆಹೆಣ್ಣು ಅಷ್ಟೇನೂ ಸುಂದರಿಯಲ್ಲದಿದ್ದರೂ ಅವರ ಶ್ರೀಮಂತ ವೈಭೋಗಕ್ಕೆ ಎಲ್ಲರೂ ಒಪ್ಪುತ್ತಾರೆ. ಹಣದಾಸೆಗೆ ಮೋಹಿತರಾಗಿ ಮದುವೆಗೆ ಸಿದ್ಧರಾಗಿರುವ ಸೆಲ್ಮಾನ ಮೈದ ಆರಿಫ್ ವರ್ತನೆಯನ್ನು ಕಂಡು ಹೇಸಿಗೆಯಾಗುತ್ತದೆ. ಹಮೀದ್ ತನ್ನ ಹೆಂಡತಿ ಸೆಲ್ಮಾಗೆ ಹಂಗಿಸುವಾಗ ಆಕೆ ಮಾರ್ಮಿಕವಾಗಿಯೇ ಉತ್ತರಿಸುತ್ತಾಳೆ.

**ಸೆಲ್ಮಾ:** ಆರಿಫ್‌ಗೆ ಒಪ್ಪಿಗೆಯಾಯಿತೆ ?

**ಹಮ್ಮೀದ್:** ಒಪ್ಪಿಗೆಯಾಗದೆ ಏನು ? ಆ ಬಂಗಲೆ, ಆ ಕಾರು, ಆ ವೈಭವ ಕಂಡ ಯಾರೇ ಆದರೂ ಒಪ್ಪದಿರುತ್ತಾರಾ ?

**ಸೆಲ್ಮಾ:** (ಕಾತುರದಿಂದ) ಅಂದರೆ ಮದುವೆ ನಿಶ್ಚಯವಾಯಿತೇ ?

**ಹಮೀದ್:** ಹೆಚ್ಚು ಕಮ್ಮಿ ನಿಶ್ಚಯವಾದಂತೆಯೇ.

**ಸೆಲ್ಮಾ:** (ನಿರುತ್ಸಾಹದಿಂದ) ಓ.................................

**ಹಮೀದ್:** ನೂರು ಪವನಿನ ಚಿನ್ನದೊಡವೆಗಳು ಮತ್ತು ಒಂದೆರಡು ಲಕ್ಷ ರೂಪಾಯಿಗಳನ್ನೂ ಕೊಡ್ತಾರಂತೆ. ಮತ್ತೇ (ಹಂಗಿಸುವಂತೆ) ನಿನ್ನಪ್ಪನ ಹಾಗೇನು ? ಇನ್ನೂ ಐವತ್ತು ಪವನು ಪೂರ್ತಿ ನಿನ್ನ ಮೈಮೇಲೆ ಹಾಕಿದ್ದಾರಾ ನಿಮ್ಮಪ್ಪ ? ಜಿಪುಣಾಗ್ರೇಸರ ! ಆ ಮನೆಯಿಂದ ಹೆಣ್ಣು ತಂದು ನಾನು ಕೆಟ್ಟೆ ನನ್ನ ತಮ್ಮ ತುಂಬಾ ಅದೃಷ್ಟವಂತ !

**ಸೆಲ್ಮಾ:** (ನೊಂದ ದನಿಯಿಂದ) ಒಂದು ಹೆಣ್ಣನ್ನು ಮದುವೆಯಾಗಲು ಆಕೆಯ ತಂದೆಯ ಐಶ್ವರ್ಯ ಮಾತ್ರ ಮುಖ್ಯವೇ ? ಹೆಣ್ಣಿಗೆ ಏನೂ ಬೆಲೆ ಇಲ್ಲವೇ ?

**ಹಮೀದ್:** ಹೆಣ್ಣಿಗೆಂತಹ ಬೆಲೆ ? ಕಾಸಿಗೊಂದು ಕೊಸರಿಗೆರಡು !...........................................................

**ಸೆಲ್ಮಾ:** (ತಿರಸ್ಕಾರದಿಂದ) ಅಂದರೇ......................ವರಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದೆಂದಾಯಿತು !

**ಹಮೀದ್:** (ಕೋಪದಿಂದ) ಮುಚ್ಚುಬಾಯಿ ! ಆರಿಫ್‌ಗೆ ದೊಡ್ಡ ಕಡೆಯಿಂದ ಹೆಣ್ಣು ಬಂದಿದೆಯೆಂದು ನಿನಗೆ ಅಸೂಯೆ !.......................................ಫ್ರಿಜ್, ಟಿ.ವಿ, ವಿ.ಸಿ.ಆರ್ ಎಲ್ಲವನ್ನೂ ಫಾರಿನ್‌ನಿಂದಲೇ ತರಿಸಿದ್ದಾರಂತೆ. ನೆಲಕ್ಕೆಲ್ಲ ಮಾರ್ಬಲ್ ಹಾಸಿದ್ದಾರೆ. ಅವನ್ನು ನೇರವಾಗಿ ರಾಜಸ್ಥಾನದಿಂದಲೇ ತರಿಸಿದ್ದಂತೆ..........................

**ಸೆಲ್ಮಾ:** (ನಡುವೆಯೇ ತಡೆದು ವ್ಯಂಗ್ಯವಾಗಿ) ಮಗಳನ್ನು ನೇರವಾಗಿ ಕಾಶ್ಮೀರದಿಂದಲೇ ತರಿಸಿದ್ದಾರೊ, ಹೇಗೆ ? ಅಥವಾ ಫಾರಿನ್ನಿನಿಂದಲೇ ?

ಸೆಲ್ಮಾಗೆ ತನ್ನ ಗಂಡನ ಮನೆಯವರೆಲ್ಲರ ಮನಸ್ಥಿತಿ ಏನೂ ಎಂಬುದನ್ನು ನೇರವಾಗಿಯೇ ಅರಿತಿದ್ದು, ತನ್ನ ತಂಗಿ ಜಮೀಲಾಳನ್ನು ತುಂಬ ಎಚ್ಚರಿಕೆಯಿಂದ ನೋಡಿಕೊಳ್ಳುವುದರ ಜೊತೆಗೆ ಎಚ್ಚರಿಕೆಯ ಮಾತುಗಳನ್ನು ವ್ಯಕ್ತಪಡಿಸಿರುತ್ತಾಳೆ. ಆರಿಫ್ ಜಮೀಲಾಳ ಜೊತೆ ಸಂತೋಷದ ಮಾತುಗಳನ್ನು ಕೇಳಿ ಮದುವೆಯ ಆಸೆಯನ್ನೂ ಹುಟ್ಟಿಸಿ, ತನ್ನ ಅಣ್ಣ ಮತ್ತು ತಾಯಿಯ ಮಾತಿನಂತೆ ಬೇರೊಬ್ಬ ಶ್ರೀಮಂತರ ಹುಡುಗಿಯನ್ನು ಮದುವೆಯಾಗುವುದಕ್ಕೆ ಒಪ್ಪುತ್ತಾನೆ. ಇಲ್ಲಿ ಆರಿಫ್‌ನ ಹೃದಯಹೀನತೆ ವ್ಯಕ್ತವಾಗುತ್ತದೆ. ಈ ಒಂದು ಕುಟುಂಬದಲ್ಲಿ ಹಣದ ವ್ಯಾಮೋಹಕ್ಕೆ ಆಕರ್ಷಿತರಾಗಿ ಮನುಷ್ಯತ್ವವನ್ನೇ ಮರೆತು, ಹೆಣ್ಣನ್ನು ಅತ್ಯಂತ ಕೀಳಾಗಿ ಕಾಣುವ ವ್ಯಕ್ತಿಗಳ ಕ್ರೂರತೆ ವ್ಯಕ್ತವಾಗುತ್ತದೆ. ಆದರೆ ಹೆಣ್ಣು ಈ ಗಂಡಸರ ಮನಸ್ಸನ್ನು ಬಹಳ ತೀಕ್ಷ್ಣವಾಗಿ ಪ್ರತಿರೋದಿಸಿರುವುದು ಈ ನಾಟಕದಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ.

**ಜಮೀಲಾ:** ಹೂಂ. ಬಣ್ಣ ಬದಲಾಯಿಸುವ ಮೋಡಗಳ ವಿಷಯವಲ್ಲವಾ ?

**ಸೆಲ್ಮಾ:** ಹೂಂ. ಅದೇ ಇವೆಲ್ಲಾ ಸಂಧ್ಯಾ ಸಮಯದಲ್ಲಿ ಪಶ್ಚಿಮ ಬಾನಿನಲ್ಲಿ ತೇಲುವ ತೆಳು ಮೋಡಗಳು; ಗಳಿಗೆಗೊಮ್ಮೆ ಬಣ್ಣ ಬದಲಾಯಿಸುತ್ತಾ ಗಾಳಿಬೀಸಿದಲ್ಲಿಗೆ ತೇಲಿ ಹೋಗುವವುಗಳು. ಮಳೆ ಸುರಿಸುವ ಮೋಡಗಳು ಬೇರೆಯೇ ಇವೆ. ಕಪ್ಪಾಗಿ ದಟ್ಟೈಸಿ ಬಂದು ಯಾರು ಏನನ್ನುವರೊ ಎಂಬ ಅಂಜಿಕೆ ಇಲ್ಲದೆ ಧಾರಾಕಾರವಾಗಿ ಮಳೆಸುರಿಸಿ ನೆಲವನ್ನು ತಂಪಾಗಿಸುತ್ತದೆ. ಹಸಿರು ಚಿಗುರುತ್ತದೆ. ಅಂತಹ ಮಳೆ ಸುರಿಸುವ ಮೋಡಗಳಿಗಾಗಿ ಕಾಯೋಣ.

ಈ ಕುಟುಂಬದವರ ಮನಸ್ಸನ್ನು ಬಣ್ಣ ಬದಲಾಯಿಸುವ ಮೋಡಗಳಿಗೆ ಹೋಲಿಸಿರುವುದು ನಾಟಕದಲ್ಲಿ ತುಂಬಾ ಅರ್ಥಪೂರ್ಣವಾಗಿ ಪ್ರತಿಬಿಂಬಿತವಾಗಿದೆ. ಹಾಗೆಯೇ ಹೆಣ್ಣು ತನ್ನ ಬದುಕಿನಲ್ಲಿ ಏನೆಲ್ಲಾ ಕಷ್ಟಕೋಟಲೆಗಳನ್ನು ಅನುಭವಿಸಿದರೂ ಮುಂದೊಂದು ದಿನ ಒಳ್ಳೆಯ ದಿನಗಳು ಬರುತ್ತದೆ ಎಂಬ ಆಶಾಭಾವನೆಯಿಂದ ಕಾಲಕಳೆಯುತ್ತಾಳೆ. ಇವುಗಳೆಲ್ಲದರ ನಡುವೆ ಹೆಣ್ಣು ಲಿಂಗತಾರತಮ್ಯವಿಲ್ಲದೆ ಹಿರಿಯರು ಕಿರಿಯರು ಎನ್ನದೆ, ನನ್ನವರು ತನ್ನವರು ಎಂದು ಭಾವಿಸದೆ ಬದುಕಿನ ಬಂಡಿಯನ್ನು ಸಾಗಿಸುತ್ತಾಳೆ.

**ಗೆದ್ದವರಾರು:** ಜಾಗತಿಕ ಕಾಲಮಾನದಲ್ಲಿ ಭ್ರಷ್ಟಾಚಾರ, ಭಯೋತ್ಪಾದನೆ, ಯುದ್ಧ ಇವೆಲ್ಲ ದೇಶದೇಶಗಳನ್ನೇ ಅಲ್ಲೋಲಕಲ್ಲೋಲ ಮಾಡುತ್ತಿವೆ, ಸಮಾಜಕ್ಕೆ ಕಂಠಕವಾಗಿವೆ. ಇವತ್ತಿನ ದಿನಮಾನಗಳಲ್ಲಿಯೂ ಗಾಂಧೀಜಿಯ ಅಹಿಂಸೆ, ಶಾಂತಿ ಸಂದೇಶಗಳು ಬಹಳ ಮುಖ್ಯವಾಗಿ ಬೇಕಾಗಿವೆ. ಏಕೆಂದರೆ ಭಯೋತ್ಪಾದನೆ, ಯುದ್ಧಗಳಿಂದ ದೇಶಗಳನ್ನು ಹಾಗೂ ಜನರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಗಾಂಧೀಜಿಯ ಶಾಂತಿ, ಅಹಿಂಸಾತತ್ವದಿಂದ ಮಾತ್ರ ಸಾಧ್ಯ. ಆದ್ದರಿಂದ ಗಾಂಧಿ ಈವತ್ತೂ ಜಗತ್ತಿಗೆ ಬೇಕಾಗಿದ್ದಾರೆ. ಮನುಷ್ಯತ್ವದ ಸಂದೇಶವನ್ನು ಸಾರಿದ್ದಾರೆ. ಭಯೋತ್ಪಾದನೆ, ಯುದ್ಧದಿಂದ ಸಾವುನೋವುಗಳುಂಟಾಗಿ ಕುಟುಂಬ ವರ್ಗದವರು

ಬೀದಿಪಾಲಾಗುವುದನ್ನು ಪುರಾತನ ಕಾಲದಿಂದಲೂ ಇಂದಿನವರೆಗೆ ನಡೆದ ಯುದ್ಧಸಂಘರ್ಷಗಳಿಂದಾದ ಅನಾಹುತಗಳನ್ನು ಗಮನಿಸಿದ್ದೇವೆ. ಇಂತಹ ಕಥಾವಸ್ತುವನ್ನು ಆಧರಿಸಿ ಯುದ್ಧದಿಂದಾದ ಅನಾಹುತದ ಚಿತ್ರಣವನ್ನು ಮನಮಿಡಿಯುವ ರೀತಿಯಲ್ಲಿ 'ಗೆದ್ದವರಾರು' ಶೀರ್ಷಿಕೆಯಲ್ಲಿ ನಾಟಕವನ್ನು ರಚಿಸಿದ್ದಾರೆ.

ಎರಡು ದೇಶಗಳ ನಡುವೆ ನಡೆದ ಯುದ್ಧದಿಂದ ಎರಡು ಕುಟುಂಬಗಳು ನಾಶವಾದ ಘಟನೆಯನ್ನು ಮನಮಿಡಿಯುವ ರೀತಿಯಲ್ಲಿ ಲೇಖಕರು ಚಿತ್ರಿಸಿದ್ದಾರೆ. ಒಂದು ವೈದ್ಯರ ಕುಟುಂಬ ಮತ್ತೊಂದು ಸೈನಿಕನ ಕುಟುಂಬವನ್ನು ತಂದು, ಇವೆರಡೂ ಕುಟುಂಬಕ್ಕಾದ ದುರಂತತೆ ಇವತ್ತಿನ ಮಾನವಕುಲಕ್ಕೆ ಎಚ್ಚರಿಕೆ ಗಂಟೆಯಾಗಿದೆ. ಆಯಾಯ ದೇಶದ ವ್ಯಕ್ತಿಗಳ ಪ್ರತಿಷ್ಠೆಗೋಸ್ಕರ ಧರ್ಮದ ಹೆಸರಿನಲ್ಲಿ ಕಲಹವುಂಟುಮಾಡಿ, ಯುದ್ಧವನ್ನು ಸೃಷ್ಟಿಸಿ ಅಮಾಯಕ ಸೈನಿಕರನ್ನು ಯುದ್ಧಕ್ಕೆ ಕಳಿಸಿ, ಅವರ ಜೀವನದ ಜೊತೆ ಆಟವಾಡುವ ಆಳುವ ವರ್ಗ ಅಮಾನುಷವಾಗಿ ವರ್ತಿಸುತ್ತಿರುವುದು ವಿಪರ್ಯಾಸ. ಹಾಗೆಯೇ ಇಲ್ಲಿ ರಾಹಿಲ್ ಎನ್ನುವ ವೈದ್ಯನ ಪತ್ನಿಯನ್ನು ಆಸ್ಪತ್ರೆಗೆ ಸೇರಿಸಿ ಆಕೆ ಒಂದು ಮಗುವಿಗೆ ಜನ್ಮನೀಡಿದ್ದಾಳೆ. ಇಂತಹ ಸಂದರ್ಭದಲ್ಲಿ ಯುದ್ಧ ಪ್ರಾರಂಭವಾಗಿದೆ. ಯುದ್ಧದಲ್ಲಿ ಅಪಘಾತವಾದವರಿಗೆ ಚಿಕಿತ್ಸೆ ನೀಡುವುದಕ್ಕೆ ವೈದ್ಯನಾದ ರಾಹಿಲ್‌ಗೆ ಕರೆ ಬರುತ್ತದೆ. ಆತ ತನ್ನ ಹೆಂಡತಿ ಮಗುವನ್ನು ಆಸ್ಪತ್ರೆಯಲ್ಲೆ ಬಿಟ್ಟು ಯುದ್ಧಭೂಮಿಗೆ ತೆರಳುತ್ತಾನೆ. ಇತ್ತ ರಾಹಿಲ್ ಯುದ್ಧಭೂಮಿಯಲ್ಲಿ ಗಾಯಗೊಂಡು ನಟ್ಟನಡುರಾತ್ರಿ ಆ ಭಯಂಕರ ಸನ್ನಿವೇಶದಲ್ಲಿ ಒಂದು ಅಪರಿಚಿತ ಮನೆಗೆ ಸೇರುತ್ತಾನೆ. ಆಗ ಅಲ್ಲಿ ಯಾರೋ ಶತ್ರು ಸೈನಿಕನಿರಬಹುದೆಂದು ತಿರಸ್ಕಾರದಿಂದ ನೋಡುವ ಸಂದರ್ಭ ಹೆಂಗಸಿನಿಂದ ಕಂಡು ಬರುತ್ತದೆ. ಆ ಮನೆಯಲ್ಲಿ ನಡೆದಂತಹ ಘಟನೆ ಹೃದಯವಿದ್ರಾವಕವಾದುದು. ಆ ಮನೆಯ ಹೆಂಗಸಿನ ಮಗ ಸೈನಿಕನಾಗಿ ಯುದ್ಧಕ್ಕೆ ತೆರಳಿದ್ದಾನೆ. ಮನೆಯಲ್ಲಿ ಈ ಹೆಂಗಸು ಮತ್ತು ಆಕೆಯ ಸೊಸೆ ಇರುತ್ತಾರೆ. ಸೊಸೆ ತುಂಬು ಗರ್ಭಿಣಿಯಾಗಿ ಜನ್ಮನೀಡುವುದಕ್ಕೆ ಹೆರಿಗೆ ಬೇನೆಯಲ್ಲಿರುತ್ತಾಳೆ. ಆ ಸಂದರ್ಭದಲ್ಲಿ ಯುದ್ಧ ನಡೆಯುತ್ತಿರುವ ಮದ್ದುಗುಂಡಗಳ ಶಬ್ದದಿಂದ ಗರ್ಭಿಣಿ ಹೆಂಗಸು ಸಾವುಬದುಕಿನ ನಡುವೆ ಒದ್ದಾಡುತ್ತಿರುವ ದೃಶ್ಯವಂತು ಕರಳುಹಿಂಡುವಂತಹದ್ದು. ರಾಹಿಲ್ ವೈದ್ಯನಾಗಿರುವ ವಿಷಯವನ್ನು ತಿಳಿಸಿ ನೆರವಾಗುತ್ತಾನೆ. ಹೆರಿಗೆಯ ಸಂದರ್ಭದಲ್ಲಿ ಮಗು ಗರ್ಭದಲ್ಲಿಯೇ ಸಾವನಪ್ಪಿದ್ದು ಅದನ್ನು ತೆಗೆದು ತಾಯಿಯನ್ನು ಬದುಕಿಸುತ್ತಾನೆ. ಇದಕ್ಕೆ ಆ ಯುದ್ಧಸಂಘರ್ಷದಿಂದಾದ ಘೋರವಾದ ಶಬ್ದಗಳೆ, ಆತಂಕಗಳೇ ಕಾರಣವಾಗುತ್ತದೆ. ರಾಹಿಲ್‌ನನ್ನು ಹುಡುಕಿಕೊಂಡು ಶತ್ರುಸೈನ್ಯದವರು ಈ ಹೆಂಗಸಿನ ಮನೆಗೆ ಬಂದಾಗ ಯುದ್ಧ ವಿರೋಧಿನೆಲೆಯ ಮಾತುಗಳು ವ್ಯಕ್ತವಾಗುತ್ತವೆ :

**ಸೈನಿಕ:** ಆದರೂ ಮನೆಯಲ್ಲೊಮ್ಮೆ ನೋಡಿ ಬಿಡಿ ಈ ಕಾಲದಲ್ಲಿ ಯಾರನ್ನೂ ನಂಬುವ ಹಾಗಿಲ್ಲ.

**ಹೆಂಗಸು:** (ಅಳುತ್ತಾ) ಹೂಂ............ಅಲ್ಲಿ ನೋಡಿ. ನನ್ನ ಚೊಚ್ಚಲು ಮೊಮ್ಮಗುವಿನ ಹೆಣ ಅಲ್ಲಿದೆ. ಅದನ್ನೂ ನೋಡಿ, ಈ ಯುದ್ಧ ನನ್ನ ಮೊಮ್ಮಗುವನ್ನು ಉಳಿಸಲಿಲ್ಲವಲ್ಲ ? ಯಾರಿಗಾಗಿ ಯಾತಕ್ಕಾಗಿ ಈ ಯುದ್ಧ ಅದನ್ನಾದರೂ ಹೇಳಿರಲ್ಲ?

ಒಂದು ಕಡೆ ಈ ಹೆಂಗಸಿನ ಮಗನನ್ನು ಯುದ್ಧಕ್ಕೆ ಬಲವಂತದಿಂದ ಕರೆದೊಯ್ದು, ಆ ಯುದ್ಧದಲ್ಲಿ ಮಗ ಸಾವನಪ್ಪಿರುವ ವಾರ್ತೆ ಬರುತ್ತದೆ ಮತ್ತು ಈ ವಂಶದ ಕುಡಿ ಸೊಸೆಯ ಗರ್ಭದಲ್ಲಿಯೇ ಸಾವನಪ್ಪಿರುವ ಸನ್ನಿವೇಶ ದುಃಖದ ಮೇರೆಯನ್ನು ಮೀರಿದೆ. ಇತ್ತ ರಾಹಿಲ್‌ನ ಕುಟುಂಬದವರು ನಾಶವಾದ ಘಟನೆಯಂತೂ ಇನ್ನೂ ದುರಂತಮಯವಾದುದು.

**ರಾಹಿಲ್:** ಇನ್ನೇನಾಗಬೇಕು ? ನಮ್ಮ ಶತ್ರುಗಳು ಅಂದರೆ ನಿಮ್ಮ ಜನರು ನಮ್ಮ ಆ ಆಸ್ಪತ್ರೆಯ ಮೇಲೆ ಬಾಂಬೆಸೆದರು.

**ಹೆಂಗಸು:** (ಆಘಾತದ ಉದ್ಗಾರ) ಹಾಂ...........ಯಾ..........ಅಲ್ಲಾಹ್..........ಆಸ್ಪತ್ರೆಯ ಮೇಲೆ ಬಾಂಬೆಸೆದರೆ ? ಸುಳ್ಳು ! ಹೃದಯವಿರುವ ಮನುಷ್ಯರು ಅಂತಹ ಕೆಲಸ ಮಾಡಲಾರರು.

**ರಾಹಿಲ್:** ನನ್ನವರಾರು ಉಳಿಯಲಿಲ್ಲ. ಮುರಿದು ಬಿದ್ದ ಕಟ್ಟಡದಡಿಯಲ್ಲಿ ಸಿಕ್ಕಿ ಬಿದ್ದು ಪ್ರಾಣತೆತ್ತವರ ಹೆಸರುಗಳೂ ಟಿ.ವಿ. ಪರದೆಯ ಮೇಲೆ ತೇಲಿ ಬಂದವು. ನನ್ನ ಸರ್ವಸ್ವವೂ ಆಗಿದ್ದ ನನ್ನ ಮಗಳು, ನನ್ನ ಹೆಂಡತಿ, ನನ್ನನ್ನು ಹೊತ್ತು ಹೆತ್ತು ಸಾಕಿದ ನನ್ನಮ್ಮ..........ಯಾ........... ಅಲ್ಲಾಹ್ ..........ಈ ನೋವನ್ನು ಹೇಗೆ ಸಹಿಸಲಿ ?

ಹೀಗೆ ಎರಡು ಕುಟುಂಬಗಳಲ್ಲಿ ಆದ ಅನಾಹುತದ ಚಿತ್ರಣವನ್ನು ವ್ಯಕ್ತಪಡಿಸಿರುವುದನ್ನು ಗಮನಿಸಿದಾಗ, ಧರ್ಮಾಂಧತೆಯಿಂದ ಯುದ್ಧಗಳು ಸೃಷ್ಟಿಯಾಗಿ, ಈ ಕುಟುಂಬಗಳು ಬೀದಿಪಾಲಾಗಿ, ಭವಿಷ್ಯತ್ತಿನ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಕಂಗಾಲಾಗುತ್ತಾರೆ. ಕೊನೆಯಲ್ಲಿ ದಿಕ್ಕಿಲ್ಲದ ಈ ಒಂದೊಂದು ಕುಟುಂಬವು ಒಟ್ಟಿಗೆ ಸೇರಿ, ಅಂದರೆ ಏಕಾಂಗಿಯಾಗಿರುವ ರಾಹಿಲ್ ಹಾಗೂ ಮನೆಯ ಯಜಮಾನನಿಲ್ಲದ ಹೆಂಗಸು ಮತ್ತು ಸೊಸೆಯ ಕುಟುಂಬದವರು ಒಂದು ಕುಟುಂಬವಾಗಿ ಬದುಕುವ ಸಂದರ್ಭ ಸೃಷ್ಟಿಸಿರುವುದು ಜಾತ್ಯತೀತತೆ & ಧರ್ಮಾತೀತತೆಗೆ ದಾರಿದೀಪವಾಗಿ ಸಮಾಜಕ್ಕೆ ಒಂದು ಮುಖ್ಯವಾದ ಸಂದೇಶವನ್ನು ನೀಡಿರುವುದು ನಿಜಕ್ಕೂ ಶ್ಲಾಘನೀಯವಾದದು.

**ಮಗಳು ಹುಟ್ಟಿದಳು:** ಸಮಾಜದಲ್ಲಿ ಶೋಷಿತಳಾಗುತ್ತಿರುವ ಹೆಣ್ಣಿನ ಬದುಕಿನ ಚಿತ್ರಣವನ್ನು ಬಹಳ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಜನಪದರು ಭೂಮಿತಾಯಿ (ಅನ್ನದಾತೆ) ಮತ್ತು ಜನ್ಮ ನೀಡುವ ತಾಯಿ (ಜನ್ಮದಾತೆ) ಇವರಿಬ್ಬರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು ಭಕ್ತಿಯಿಂದ ಪೂಜಿಸುತಿದ್ದರು. ಆದರೆ ಕಾಲ ಬದಲಾದಂತೆ ಇವೆಲ್ಲ ಕಣ್ಮರೆಯಾಗಿ ಮಾನವೀಯ ಮೌಲ್ಯಗಳೇ ಮಾಯವಾಗಿ ಸಮಾಜ ಇವತ್ತು ಬರಡಾಗಿರುವ ಸಂದರ್ಭವನ್ನು ಕಾಣುತ್ತಿರುವುದು ವಿಪರ್ಯಾಸ. ಜಾತಿ, ಧರ್ಮ, ಲಿಂಗತಾರತಮ್ಯ ಇವೆಲ್ಲ ಹೆಚ್ಚಾಗಿ ಸಮಾಜವೇ ಸಂಕುಚಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಲೇಖಕರು ಪ್ರಸ್ತುತದಲ್ಲಿ ಹೆಣ್ಣನ್ನು ಎಷ್ಟು ಅಸಡ್ಡೆಯಿಂದ ಕಾಣುತ್ತಿದ್ದಾರೆ ಹಾಗೆಯೇ ಶೋಷಣೆ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸುವುದರ ಜೊತೆಗೆ, ಹೆಣ್ಣು ಸಮಾಜಕ್ಕೆ ಪ್ರತಿಸ್ಪರ್ಧಿಯಾಗಿ ನಿಂತು ತನ್ನ ಬದಕಿನಲ್ಲಿ ಸಾಧಿಸಿ ತೋರಿಸುವ ಅಚಲವಾದ ಶಕ್ತಿ ಅವಳಿಗಿದೆ ಎಂಬುದನ್ನು 'ಮಗಳು ಹುಟ್ಟಿದಳು' ಭಾಗದಲ್ಲಿ ವ್ಯಕ್ತಪಡಿಸಿದ್ದಾರೆ.

ಕಮಲಳ ಕುಟುಂಬದಲ್ಲಿ ತನ್ನ ತಾಯಿ ಹಾಗೂ ಮಗಳು ಸುಮನಾ, ನೀಲಿ ಮತ್ತು ಕಮಲಳ ಗಂಡನ ಮನೆಯಲ್ಲಿ ಅತ್ತೆ, ಗಂಡ ಶಂಕರ, ಮೈದ ಸೋಮಪ್ಪ ಪಾತ್ರಗಳು ಕಂಡುಬರುತ್ತವೆ. ಕಮಲ ಮದುವೆಯಾದ ಮೂರು ವರ್ಷಗಳಲ್ಲಿ ಅನುಭವಿಸಿದ ಯಾತನೆ ನೂರು ವರ್ಷವನ್ನೂ ಮೀರಿಸುವಂತಿರುತ್ತದೆ. ಕಮಲಳ ಗಂಡನ ಮನೆಯಲ್ಲಿ ಪ್ರತೀದಿನ ಮುಂಜಾನೆ ದೇಹ ಮತ್ತು ಸೊಂಟ ಬಗ್ಗಿಸಿ ಕೆಲಸ ಪ್ರಾರಂಭಿಸಿದರೆ ಮುಗಿಯುತ್ತಿದ್ದುದು ನಡುರಾತ್ರಿ. ಇಷ್ಟೆಲ್ಲಾ ದೈಹಿಕವಾಗಿ ದುಡಿದರೂ ಮಾನಸಿಕವಾಗಿ ಸಂತೈಸುವ

ಮನೋಭಾವನೆ ಗಂಡನಲ್ಲಿ ಇಲ್ಲ. ಅವನೊಬ್ಬ ಉಂಡಾಡಿಗುಂಡ, ತಾಯಿಯ ಮಾತಿಗೆ ತಲೆಯಾಡಿಸುವವನು. ಅತ್ತೆ, ಗಂಡ ಇಬ್ಬರು ಸೇರಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಚಿತ್ರಹಿಂಸೆ ಕೊಟ್ಟವರು. ಗರ್ಭಿಣಿಯಾಗಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಾಗ ಹೆಣ್ಣು ಎನ್ನುವ ಉದ್ದೇಶದಿಂದ ತಾತ್ಸಾರದಿಂದ ಮಗುವನ್ನು ನೋಡುವುದಕ್ಕೆ ಬಂದದ್ದು ಹತ್ತು ದಿನ ಕಳೆದ ಮೇಲೆ, ಆಗಲೂ ತಿರಸ್ಕಾರದ ಮಾತುಗಳು. ಬಾಣಂತಿತನ ಮುಗಿಸಿ, ಗಂಡನ ಮನೆಗೆ ಬಂದಾಗ ಅತ್ತೆ, ಗಂಡ ಬಹಳ ಕ್ರೂರಿಗಳಂತೆ ನೋಡಿಕೊಳ್ಳುತ್ತಾರೆ. ಹೆಣ್ಣು ಮಗು ಎನ್ನುವ ಕಾರಣದಿಂದ ಜನ್ಮ ನೀಡಿದ ತಾಯಿಯನ್ನು ಹೊರತುಪಡಿಸಿ ಆ ಮಗುವಿಗೆ ಯಾರು ಪಾಲನೆ, ಪೋಷಣೆ, ಪ್ರೀತಿ ಏನೂ ಮಾಡುವುದಿಲ್ಲ. ಒಮ್ಮೆ ಆ ಮಗುವಿಗೆ ಶೀತ, ಜ್ವರ ಬಂದಾಗ ಚಿಕಿತ್ಸೆ ಕೊಡಿಸದೆ ಸಾವನ್ನಪ್ಪುತ್ತದೆ. ಆ ದೃಶ್ಯವಂತೂ ಕರುಳುಹಿಂಡುತ್ತದೆ.

**ಕಮಲ:** (ಸ್ವಗತ) ಆ ದಿನ ರಾತ್ರಿಯಾಗುತ್ತಿದ್ದಂತೆ ಮಗುವಿನ ಜ್ವರ ಏರುತ್ತಾ ಹೋಯಿತು. ಗಂಟಲಲ್ಲಿ ಕಫ ಸಿಕ್ಕಿಕೊಂಡಂತೆ, ಉಸಿರಾಟಕ್ಕೆ ಕಷ್ಟಪಡುತ್ತಿದ್ದಂತೆ ಕಂಡಿತು. ಹಾಲು ಕುಡಿಯಲೂ ಕಷ್ಟ ಪಡುತ್ತಿತ್ತು. ತಾಯಿ, ಮಗ ಇಬ್ಬರೂ ಮಗುವಿನ ಖಾಯಿಲೆಯ ಪರಿವೆಯೇ ಇಲ್ಲದಂತೆ ನಿದ್ರಿಸಿದರು. ಆದರೆ ನನ್ನದು ಎಷ್ಟಾದರೂ ಹೆತ್ತ ಕರುಳಲ್ಲವೇ ? ಮಗುವನ್ನು ಮಡಿಲಲ್ಲಿಟ್ಟುಕೊಂಡೇ ಬೆಳಗಾಗಿಸಿದೆ. ಒಂದು ತೊಟ್ಟು ಹಾಲನ್ನೂ ಹೀರದ ನನ್ನ ಕಂದ ನನ್ನೆದೆಗೊರಗಿಕೊಂಡೇ ಒಂದು ಬಾರಿ ಕಣ್ಣು ತೆರೆದು ನನ್ನ ಮುಖ ನೋಡಿ ಮುಗುಳ್ನಕ್ಕಂತೆ ಕಂಡಿತು. ಪುನಃ ಉಸಿರು ಸಿಕ್ಕಿಕೊಂಡಂತೆ ಒದ್ದಾಡಿತು. ಹೌದು. ಆ ಬೆಳಗು ನನ್ನ ಪಾಲಿಗೆ ಬೆಳಗಾಗಿರಲಿಲ್ಲ. ನನ್ನ ಬದುಕನ್ನೇ ಮುಸುಕಿದ ಕತ್ತಲೆಯಾಗಿತ್ತು ಆ ಬೆಳಗು. ನನ್ನ ಹೊಟ್ಟೆಯೊಳಗಿಂದ ಬಂದ ನನ್ನ ಮಗಳು ನನ್ನ ಹೊಟ್ಟೆಗೊರಗಿಕೊಂಡೇ ಹೊರಟು ಹೋಗಿದ್ದಳು ನನ್ನನ್ನು ಈ ಮನುಷ್ಯ ಮೃಗಗಳ ಬಳಿ ಬಿಟ್ಟು ಊರಿಂದ ನನ್ನಮ್ಮ ಬಂದರು. (ತಾಯಿ, ಮಕ್ಕಳ ಅಳು, ರೋದನ, ಬಳಿಕ)

ಕಮಲ ತನ್ನ ಮಗುವನ್ನು ಕಳೆದುಕೊಂಡು ಸಂಕಟ, ದುಃಖದಲ್ಲಿ ಬದುಕನ್ನು ದೂಡುತ್ತಿದ್ದಾಳೆ. ಅನಂತರ ಮತ್ತೊಮ್ಮೆ ಗರ್ಭಿಣಿಯಾಗಿ ಹೆರಿಗೆಗೆ ತವರು ಮನೆಗೆ ಹೋಗಿ ಮತ್ತೆ ಹೆಣ್ಣುಮಗುವಿಗೆ ಜನ್ಮನೀಡುತ್ತಾಳೆ. ಆದರೆ ಕೆಲವು ತಿಂಗಳುಗಳೇ ಕಳೆದರೂ ಗಂಡನಾಗಲಿ ಆತನ ಮನೆಯವರಾರು ತಾಯಿ ಮಗುವನ್ನು ನೋಡುವುದಕ್ಕೆ ಬರುವುದಿಲ್ಲ. ಯಾವ ಮನೆಯಲ್ಲಿ ಹೆಣ್ಣುಮಗು ಹುಟ್ಟುವುದೇ ಮಹಾಪಾಪ ಎಂದು ತಿಳಿದಿದ್ದಾರೋ ಅಂತಹ ಮನೆಗೆ ನಾನಿನ್ನು ಕಾಲಿಡಲಾರೆ ಎಂದು ಕಮಲ ತನ್ನ ಅಮ್ಮನಿಗೆ ಹೇಳುತ್ತಾಳೆ. ಹೇಗಿದ್ದರೂ ಹೊಲಿಗೆ ತರಬೇತಿ ಕಲಿತಿರುವುದರಿಂದ ಯಂತ್ರವನ್ನು ಕೊಂಡು ಪ್ರತ್ಯೇಕವಾಗಿ ಜೀವನ ಸಾಗಿಸುತ್ತೇನೆ ಎಂದು ಗಟ್ಟಿ ನಿರ್ಧಾರ ಮಾಡುತ್ತಾಳೆ. ಅಮ್ಮ ಸಹಜವಾಗಿ ಹರೆಯದ ಹೆಣ್ಣು ಒಂಟಿಯಾಗಿ ಬದುಕಲು ನಮ್ಮೂರಿನ ಹದ್ದುಗಳು ಬಿಡುವವೇ ? ಎಂದು ತನ್ನ ಆತಂಕವನ್ನು ವ್ಯಕ್ತಪಡಿಸಿ ಗಂಡನ ಮನೆಗೆ ಹೋಗುವುದಕ್ಕೆ ಒತ್ತಾಯಿಸುತ್ತಾಳೆ. ಅಂತಹ ಆಪತ್ತು ಒದಗಿ ಬಂದರೂ ತನ್ನ ನಡೆವಳಿಕೆಯನ್ನು ಕಾಪಾಡಿಕೊಳ್ಳುತ್ತಾಳೆ. ಕಮಲ ತಾಯಿಯ ಮಾತಿಗೆ ಒಪ್ಪದೆ ತನ್ನ ವೃತ್ತಿಯನ್ನು ಪ್ರಾರಂಭಿಸಿ ಬರುವ ಅಲ್ಪಹಣದಲ್ಲೇ ತನ್ನ ಮಗಳು ಸುಮನಾಳನ್ನು ಓದಿಸಿ ವೈದ್ಯೆಯನ್ನಾಗಿ ಮಾಡುತ್ತಾಳೆ. ಕಮಲಳ ಗಂಡನ ತಮ್ಮ ಸೋಮಪ್ಪನ ಹೆಂಡತಿ ಹೆರಿಗೆ ಬೇನೆಯಿಂದ ಸರ್ಕಾರಿ ಆಸ್ಪತ್ರೆಗೆ ಸೇರಿಸಿದಾಗ ಸಾವು ಬದುಕಿನ ನಡುವೆ ಒದ್ದಾಡುತ್ತಿರಬೇಕಾದರೆ ಸೋಮಪ್ಪನ ಹೆಂಡತಿಯ ಜೀವವನ್ನು ಉಳಿಸಿದವಳು ಸುಮನಾ. ನನ್ನಣ್ಣನ ಮಗಳು ಸರ್ಕಾರಿ ವೈದ್ಯೆಯ ವೃತ್ತಿಯನ್ನು ಗಳಿಸಿಕೊಂಡು ಜನರ ಸೇವೆಯನ್ನು ಮಾಡುತ್ತಿದ್ದಾಳಲ್ಲ ಎಂದು ತನ್ನ ಕುಟುಂಬದವರೆಲ್ಲರೂ ಹೆಮ್ಮೆಪಡುತ್ತಾರೆ. ಅದುವರೆಗೂ ಹೆಣ್ಣು ಎಂದರೆ ಮೂಗುಮುರಿಯುತ್ತಿದ್ದ ಅವರಿಗೆ ಕಮಲ ತಾನು ಸಾಧಿಸಿ ತೋರಿಸಿದ ಜೀವನದ ಘಟನೆ ಸಮಾಜಕ್ಕೆ ಮಾದರಿಯಾಗಿದೆ.

**ಕನಸು ಮೊಗ್ಗೊಡೆಯಿತು:** ಲೇಖಕರು ಕನ್ನಡ ಕಥಾಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ. ಇವರ ಕಥೆಗಳಲ್ಲಿ 'ಚಪ್ಪಲಿಗಳು' ಕಥೆ ಪ್ರಮುಖವಾದುದು. ಆ ಕಥೆಯ ವಸ್ತುವನ್ನೇ ಆಯ್ದು ನಾಟಕ ರಚಿಸಿರುವುದು ಔಚಿತ್ಯಪೂರ್ಣವಾಗಿದೆ. ಈ ಭಾಗದಲ್ಲಿ ಹೆಣ್ಣಿನ ಶೋಷಣೆ ಪ್ರಮುಖವಾಗಿ ಕಂಡುಬರುತ್ತದೆ. ಹೆಣ್ಣನ್ನು ಮನುಷ್ಯಳಾಗಿ ಕಾಣದೆ ಒಂದು ಯಂತ್ರದ ರೀತಿಯಲ್ಲಿ ಕೆಲಸ ಮಾಡಿಸಿಕೊಳ್ಳುವುದಿದೆಯಲ್ಲ ಇದು ಅತ್ಯಂತ ಶೋಚನೀಯವಾದುದು. ಹೆಣ್ಣು ಎಂದರೆ ನಾಲ್ಕುಗೋಡೆಗಳ ಮಧ್ಯದಲ್ಲಿದ್ದು ಯಂತ್ರದ ರೀತಿಯಲ್ಲಿ ಮಕ್ಕಳಿಗೆ ಜನ್ಮನೀಡುತ್ತಲೇ ಪಾಲನೆ ಪೋಷಣೆ ಮಾಡುವುದೊಂದೇ ಕೆಲಸವೆಂದು ಭಾವಿಸಿರುವ ಜನರಿಗೆ ಲೇಖಕರು ಕಥಾವಸ್ತುವಿನಲ್ಲಿ ಒಂದು ಒಳ್ಳೆಯ ಸಂದೇಶವನ್ನು ಕೊಟ್ಟಿದ್ದಾರೆ.

ಹಸನ್, ಫಾತಿಮ ದಂಪತಿಗಳಿಗೆ ಸಮೀರಾ ಹಿರಿಯಮಗಳು. ಹಸನ್‌ನ ಸಹೋದರಿಯ ಮಗ ಶಬೀರ್– ಈ ಪಾತ್ರಗಳು ನಾಟಕದಲ್ಲಿ ಕಂಡುಬರುತ್ತವೆ. ಶಬೀರ್ ಕೊಲ್ಲಿ ರಾಷ್ಟ್ರದ ಹೋಟೆಲ್ ಒಂದರಲ್ಲಿ ಕೆಲಸ ಮಾಡಿಕೊಂಡಿರುತ್ತಾನೆ. ಹಸನ್ ತನ್ನ ಹಿರಿಯ ಮಗಳು ಸಮೀರಾ ದೊಡ್ಡವಳಾದಂತೆ ಹೆಣ್ಣು ಮಕ್ಕಳು ಓದುವುದು ದೊಡ್ಡ ಅಪವಾದವೆಂಬಂತೆ ಶಾಲೆಯನ್ನು ಬಿಡಿಸಿ ಮದುವೆ ಮಾಡುವ ತೀರ್ಮಾನಕ್ಕೆ ಬರುತ್ತಾನೆ. ಸಮೀರಾಳನ್ನು ಶಬೀರ್‌ಗೆ ಕೊಟ್ಟು ಮದುವೆ ಮಾಡುತ್ತಾನೆ. ಶಬೀರ್ ಬರುತ್ತಿದ್ದುದು ವರ್ಷಕ್ಕೊಮ್ಮೆಯಾದರೂ ಆ ದಿನಗಳಲ್ಲಿ ಅತ್ಯಂತ ಸಂತೋಷದಿಂದ ಈ ದಂಪತಿಗಳು ಕಾಲಕಳೆಯುತ್ತಾರೆ. ಶಬೀರ್ ಕೊಲ್ಲಿ ರಾಷ್ಟ್ರದಲ್ಲಿರಬೇಕಾದರೆ ಸಮೀರಾ ತನ್ನ ತವರುಮನೆಯಲ್ಲಿ ಚಾಕರಿ ಮಾಡಿಕೊಂಡಿರುತ್ತಾಳೆ. ವರ್ಷಕ್ಕೊಮ್ಮೆ ಶಬೀರ್ ಬರುವಿಕೆಯನ್ನು ಕಾಯುತ್ತಿದ್ದರೆ; ಇತ್ತ ಫಾತಿಮ್ಮ ವರ್ಷಕ್ಕೊಮ್ಮೆ ಒಂದೊಂದು ಮಗುವಿಗೆ ಜನ್ಮ ನೀಡುತ್ತಾ ಹೋಗುತ್ತಾಳೆ. ಮನೆಕೆಲಸ ತಂಗಿಯರ ಪಾಲನೆ, ಪೋಷಣೆಯ ಜವಾಬ್ದಾರಿಯನ್ನೆಲ್ಲ ಸಮೀರಳೇ ಹೊತ್ತಿರುತ್ತಾಳೆ. ಹೀಗಿರಬೇಕಾದರೆ ಶಬೀರ್ ಕೊಲ್ಲಿ ರಾಷ್ಟ್ರದಿಂದ ಬಂದಾಗ ತನ್ನ ತಾಯಿಯ ಬಾಣಂತಿತನವನ್ನು ಮಾಡುತ್ತಿರುತ್ತಾಳೆ. ಆದರೆ ತನ್ನ ಗಂಡನ ಜೊತೆಯಲ್ಲಿರುವುದಕ್ಕೆ ಸಾಧ್ಯವಾಗುವುದಿಲ್ಲ. ಇದ್ದಕ್ಕಿದ್ದಂತೆ ಸಮೀರಾ ಮಾನಸಿಕವಾಗಿ ಅಸ್ವಸ್ಥಳಾಗುತ್ತಾಳೆ.

ಶಬೀರನಿಗೆ ಆಘಾತವುಂಟಾಗಿ ಸಮೀರಾಳನ್ನು ಮನೋವೈದ್ಯರ ಬಳಿ ಕರೆದೊಯ್ದು ಚಿಕಿತ್ಸೆ ನೀಡುವ ಸಂದರ್ಭವನ್ನು ಗಮನಿಸುತ್ತೇವೆ. ಪ್ರಮುಖವಾಗಿ ಈ ಭಾಗದಲ್ಲಿ ಹಸನ್ ಈತ ಹೆಣ್ಣನ್ನು ಯಂತ್ರದ ರೀತಿಯಲ್ಲಿ ಕಾಣುತ್ತಾನೆ. ಹೊರತು ಮನುಷ್ಯಳಾಗಿ ಕಾಣುವುದಿಲ್ಲ. ತನ್ನ ಮಗಳನ್ನು ಮದುವೆ ಮಾಡಿದರೂ ಇನ್ನೂ ಮಕ್ಕಳನ್ನು ಮಾಡಿಕೊಂಡು ಹೋಗುವ ಈತ ಕೌಟುಂಬಿಕ ಜವಾಬ್ದಾರಿ ಮತ್ತು ಸಾಮಾಜಿಕ ಪ್ರಜ್ಞೆಯೇ ಇಲ್ಲ. ಇಂತಹ ವ್ಯಕ್ತಿಗಳಿಂದ ಸಮಾಜದಲ್ಲಿ ಎಷ್ಟೋ ಹೆಣ್ಣುಮಕ್ಕಳು ಮಾನಸಿಕ ಖಿನ್ನತೆಗೆ ಬಲಿಯಾಗುತ್ತಿರುವುದನ್ನು ಕಾಣಬಹುದು. ಆಯಾಯ ವಯೋಮಾನಕ್ಕನುಸಾರವಾಗಿ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದರ ಜೊತೆಗೆ ಮುಕ್ತವಾಗಿಯೂ ಇರುವುದು ಒಳ್ಳೆಯದು. ಹೆಣ್ಣುಮಕ್ಕಳನ್ನು ಸಿನಿಮಾ, ನಗರಪ್ರದೇಶಕ್ಕೆ ಕರೆದುಕೊಂಡು ಹೋಗುವುದು ಅಪವಾದ ಎನ್ನುವ ರೀತಿಯಲ್ಲಿ ವರ್ತಿಸುವುದು, ಹೆಣ್ಣುಮಕ್ಕಳನ್ನು ಚಪ್ಪಲಿಗೆ ಹೋಲಿಸಿರುವುದು ಎಂತಹ ದುರಂತತೆಗೆ ಕಾರಣವಾಗಿದೆ ಎಂಬುದು ಅರಿವಾಗುತ್ತದೆ.

**ಹಸನ್:** ಧೈರ್ಯದ ವಿಷಯವಲ್ಲ ಶಬೀರ್............ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಚಪ್ಪಲಿಗಳನ್ನು ಎಲ್ಲಿಡಬೇಕೊ ಅಲ್ಲೆ ಇಡುವುದನ್ನು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ ?

ಒಂದು ರೀತಿಯಲ್ಲಿ ಚಪ್ಪಲಿಗಳಾದರೂ ಪಾದರಕ್ಷಕವಾಗಿ ಸಹಾಯಕವಾಗಿದೆ. ಆದರೆ ಹಸನ್‌ನಂತಹ ವ್ಯಕ್ತಿಗಳು ಸಮಾಜದಲ್ಲಿರುವುದಕ್ಕಿಂತ ಮೃಗಗಳಾಗಿರುವುದು ಮೇಲು. ಇನ್ನೊಬ್ಬರ ಮನಸ್ಥಿತಿಯ ಸ್ವಾತಂತ್ರ್ಯವನ್ನು ಹರಣ ಮಾಡಿ ಬದುಕುವ ರೀತಿ ಎಷ್ಟು ಸರಿ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವುದು ಮುಖ್ಯ. ಹೀಗೆ ಸಮೀರಾಳ ಮನಸ್ಥಿತಿಯ ಸ್ವಾತಂತ್ರವನ್ನು ಕಸಿದುಕೊಂಡದ್ದರಿಂದ ಆಕೆ ಮನೋರೋಗಿಯಾಗಿ ಅವಳ ಬಾಳಿನಲ್ಲಿ ಆದ ಅನಾಹುತ ಎಷ್ಟು ದುರಂತತೆಯನ್ನುಂಟು ಮಾಡಿತು ಎಂಬುದು ವ್ಯಕ್ತವಾಗುತ್ತದೆ. ಕೊನೆಗೆ ಮನೋವೈದ್ಯರನ್ನು ಭೇಟಿ ಮಾಡಿ ಪರಿಹಾರವನ್ನು ಕರೆದುಕೊಂಡು ಶಬೀರ್ ತನ್ನ ಪತ್ನಿ ಸಮೀರಾಳ ಜೊತೆಯಲ್ಲಿದ್ದು ತನ್ನ ಪ್ರೀತಿಯ ಕನಸು ಮೊಗ್ಗಡೆಯಿತು.

**ತಾಳ:** ಜೀವನವೆಂಬುದು ಗಂಡನ ತಾಳಕ್ಕೆ ತಕ್ಕಂತೆ ಕುಣಿಯುವುದು ಆಗಿರುತ್ತದೆ. ಈ ಹಿನ್ನಲೆಯಲ್ಲಿ ಲೇಖಕರು ಈ ಭಾಗದ ಕಥಾವಸ್ತುವನ್ನು ತುಂಬಾ ಅರ್ಥಗರ್ಭಿತವಾಗಿ ವ್ಯಕ್ತಪಡಿಸಿದ್ದಾರೆ. ಮಧುಕರನ ಕುಟುಂಬದಲ್ಲಿ ಅಮ್ಮ, ಹೆಂಡತಿ ಮಾಲಿನಿ, ಹೆಣ್ಣು ಮಕ್ಕಳಾದ ಲತಾ, ಗೀತಾ, ಸ್ನೇಹಿತ ಬಾಲಚಂದ್ರ, ವಸುಧಾ, ಹಾಗೆಯೇ ಡಾಕ್ಟರ್, ನರ್ಸ್ ಪಾತ್ರಗಳು ಕಂಡುಬರುತ್ತವೆ. ಪ್ರಮುಖವಾಗಿ ಮಧುಕರ ಮತ್ತು ಆತನ ಹೆಂಡತಿ ಮಾಲಿನಿ ಇವರ ನಡುವೆಯೇ ನಾಟಕದ ಪ್ರಾರಂಭದಿಂದ ಅಂತ್ಯದವರೆಗೆ ಸಂಭಾಷಣೆಗಳು ಹೆಣೆದುಕೊಂಡಿದೆ. ಲೇಖಕರೇ ಹೇಳಿದಂತೆ 'ವೈವಾಹಿಕ ಬದುಕೆಂಬುದು ಎರಡು ಗಾಲಿಗಳ ಬಂಡಿ ಎಂಬುದನ್ನು ಮರೆಯಬೇಡಿ' ಎನ್ನುವಂತೆ ಗಂಡ–ಹೆಂಡತಿಯರೇ ಎರಡು ಗಾಲಿಗಳು. ಒಂದು ಗಾಲಿ ಇಲ್ಲವೆಂದರೆ ಅಥವಾ ಒಂದು ಗಾಲಿಯ ಲಯ ತಪ್ಪಿದರೆ ಬಂಡಿ ಮುಂದೆ ಸಾಗುವುದಿಲ್ಲ. ಹಾಗೆಯೇ ಗಂಡಹೆಂಡತಿಯರು ತಮ್ಮ ಸಾಂಸಾರಿಕ ಬದುಕನ್ನು ತುಂಬಾ ಅನ್ಯೋನ್ಯತೆಯಿಂದ ಸರಿದೂಗಿಸಿಕೊಂಡು ಹೋಗುವುದರಿಂದ ಆ ಸಂಸಾರದಲ್ಲಿ ಪ್ರೀತಿ, ಸಂತೋಷ, ನೆಮ್ಮದಿ ತುಂಬಿರುತ್ತದೆ. ಇಂತಹ ನೆಮ್ಮದಿ, ಪ್ರೀತಿ, ಸಂತೋಷದ ಹುಡುಕಾಟವನ್ನು ಈ ದಾಂಪತ್ಯ ಜೀವನದಲ್ಲಿ ಕಾಣುತ್ತೇವೆ.

ಪ್ರಸ್ತುತದಲ್ಲಿ ವಿಜ್ಞಾನ ಸಾಕಷ್ಟು ಪ್ರಗತಿಯನ್ನು ಸಾಧಿಸುತ್ತಿದೆ; ಅಷ್ಟೇ ಅನಾಹುತಕ್ಕೂ ಕಾರಣವಾಗುತ್ತಿದೆ. ಅದನ್ನು ಒಳ್ಳೆಯ ರೀತಿಯಲ್ಲಿ ಸದುಪಯೋಗಪಡಿಸಿಕೊಂಡರೆ ಸರಿ, ಇಲ್ಲವಾದರೆ ಮಾನವಕುಲ ಮಾತ್ರವಲ್ಲ ಸಕಲ ಜೀವರಾಶಿಗಳೇ ಅಳಿವಿನ ಹಂತವನ್ನು ಮುಟ್ಟುತ್ತವೆ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ, ಲೇಖರು ಈ ಒಂದು ಭಾಗದಲ್ಲಿ ಪ್ರಧಾನವಾಗಿ 'ಭ್ರೂಣಹತ್ಯೆ'ಯ ಚಿತ್ರಣವನ್ನು ಬಹಳ ಸೂಕ್ಷ್ಮವಾಗಿ ತಂದು, ವಿಜ್ಞಾನದ ಪ್ರಗತಿಯಿಂದ ಹೆಣ್ಣು ಸಂತಾನವನ್ನೇ ನಾಶಮಾಡುವ ಹಂತಕ್ಕೆ ಈ ಮನುಷ್ಯ ತಲುಪುತ್ತಿದ್ದಾನೆ. ಹೀಗೆ ಹೆಣ್ಣು ಭ್ರೂಣಹತ್ಯೆಗಳು ಮುಂದುವರಿಯುತ್ತಾ ಹೋದರೆ ಮುದೊಂದು ದಿನಮಾನಗಳಲ್ಲಿ ಹೆಣ್ಣಿನ ಸಂಖ್ಯೆ ಕಡಿಮೆಯಾಗಿ ಸಮಾಜದಲ್ಲಿ ರಾವಣನಂತಹ ವ್ಯಕ್ತಿಗಳೇ ಹೆಚ್ಚಾಗಬಹುದು (ಮೃಗಗಳಾಗಬಹುದು). ಈಗಾಗಲೇ ದೇಶದಲ್ಲಿ ಹೆಣ್ಣಿನ ಮೇಲೆ ನಾನಾ ರೀತಿಯ ಶೋಷಣೆಗಳು, ದೌರ್ಜನ್ಯಗಳು ನಡೆಯುತ್ತಿದ್ದು, ಮುದೊಂದು ದಿನ ಇದು ಅತಿಯಾಗಬಹುದು.

ಮಧುಕರ ಮತ್ತು ಮಾಲಿನಿ ದಂಪತಿಗಳಿಗೆ ಈಗಾಗಲೇ ಎರಡು ಹೆಣ್ಣುಮಕ್ಕಳಿವೆ. ಆದರೆ ಪತಿಗೆ ಗಂಡುಮಕ್ಕಳ ವ್ಯಾಮೋಹವುಂಟಾಗಿ ತಮ್ಮ ದಾಂಪತ್ಯ ಜೀವನದಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಸೃಷ್ಟಿಯಾಗಿವೆ. ತನ್ನ ಸಂಸಾರ ನಡೆಸುವಷ್ಟು ಒಂದು ನೌಕರಿಯಿದೆ. ಇನ್ನೊಂದು ಮಗುಬೇಕೆಂಬ ಆಸೆ. ಆದರೆ ಅದು ಗಂಡಾಗಿರಬೇಕೆಂಬುದು ಗಂಡನದು. ಮುಂದಿನ ಮಗು ಎಲ್ಲಿ ಹೆಣ್ಣುಮಗುವಾದೀತು ಎಂಬ ಆತಂಕ ಬೇರೆ ಆತನದು. ಮಾಲಿನಿ ಮಾತ್ರ ಹೆಣ್ಣಾಗಲಿ ಗಂಡಾಗಲೀ ಎರಡೇ ಮಕ್ಕಳು ಸಾಕು ಎಂಬ ತೀರ್ಮಾನ. ಆದರೆ ಬೇರೆ ದಾರಿ ಇಲ್ಲದೆ ಗಂಡನ ತಾಳಕ್ಕೆ ತಕ್ಕಂತೆ ಕುಣಿಯುವ ಸಂದರ್ಭವೂ ಪತ್ನಿಗೆ ಬರುತ್ತದೆ. ಗಂಡ–ಹೆಣ್ಣಿನ ದೈಹಿಕ ಶ್ರಮ, ಮಾನಸಿಕ ಒತ್ತಡಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾಲಿನಿ ಮನೆಯಲ್ಲಿ ಮನೆಗೆಲಸ, ಮಕ್ಕಳ ಪಾಲನೆ, ಪೋಷಣೆ ಇವೆಲ್ಲ ದಿನನಿತ್ಯದ ಕೆಲಸದಲ್ಲಿ ಭಾಗಿಯಾಗಿರುತ್ತಾಳೆ. ಮತ್ತೊಮ್ಮೆ ಗರ್ಭಿಣಿಯಾದಾಗಲು ಇದೆಲ್ಲದರ ನಿರ್ವಹಣೆಯಲ್ಲಿಯೂ ಗಂಡನೂ ಕೂಡ ಸಹಕರಿಸುವುದಿಲ್ಲ.

ಪ್ರಾಣಿಗಳ ವಿಚಾರಕ್ಕೆ ಬಂದಾಗ ಅದರಲ್ಲೂ ಹಸುಗಳು ಹೆಣ್ಣು ಕರುಗಳಿಗೆ ಜನ್ಮನೀಡಿದರೆ ಸಂತೋಷ ಪಡುತ್ತಾರೆ. ಮನುಷ್ಯರ ವಿಷಯಕ್ಕೆ ಬರುವಾಗ ತಿರುಗುಮುರುಗು. ಲತಾ ಹುಟ್ಟಿದಾಗ ಮೊದಲ ಮೊಮ್ಮಗುವೆಂದು ಸಂತಸಪಟ್ಟ ತಾಯಿ ಮಗ, ಎರಡನೆಯ ಮಗು ಗೀತಾಳನ್ನು ಬರಮಾಡಿಕೊಂಡದ್ದು ಗಂಟಿಕ್ಕಿದ ಮುಖದಿಂದಲೇ. ಮೂರನೆಯದು ಎಲ್ಲಿ ಹೆಣ್ಣು ಆದೀತು ಎಂಬ ಆತಂಕ ಗಂಡನದಾದರೇ, ಮಾಲಿನಿ ಯಾವುದಾದರೂ ಸರಿ ಇಷ್ಟಕ್ಕೆ ಮಕ್ಕಳು ಸಾಕು ಎಂಬ ನಿರ್ಧಾರ. ಗಂಡು ಮಗು ಬೇಕೆಂಬ ಗುಂಗಿನಲ್ಲೇ ದಾಂಪತ್ಯದಲ್ಲಿ ನಿರಂತರವಾದ ಇರುಸುಮುರುಸುಗಳು ನಡೆಯುತ್ತಲೇ ಇರುತ್ತವೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳಬೇಕೆಂಬ ಉದ್ದೇಶವೇ ಹೊರತು, ಅವರಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕು ಎಂಬ ಭವಿಷ್ಯತ್ ಕಲ್ಪನೆಯೇ ಇರುವುದಿಲ್ಲ. ಮಧುಕರನ ಸ್ನೇಹಿತ ಬಾಲಚಂದ್ರನ ಹೆಂಡತಿ ಗರ್ಭಿಣಿಯಾದಾಗ ಗಂಡುಮಗು ಪಡೆಯುವುದಕ್ಕೋಸ್ಕರವೇ ಲಿಂಗಪರೀಕ್ಷೆ ಮಾಡಿಸಿದಾಗ ಅದು ಹೆಣ್ಣು ಎಂದು ಗೊತ್ತಾದಾಗ ಅಬಾರ್ಷನ್ ಮಾಡಿಸಿಕೊಂಡ ವಿಷಯ ತಿಳಿಯುತ್ತದೆ. ಇದರಿಂದ ಇವತ್ತಿನ ದಿನಮಾನದಲ್ಲಿ ಅದೆಷ್ಟೋ ಭ್ರೂಣಹತ್ಯೆಗಳು ನಡೆಯುತ್ತಿವೆ ಎಂಬುದು ಇಂತಹ ಘಟನೆಗಳಿಂದ ಕಾಣಬಹುದು. ಇದನ್ನು ಮಧುಕರ ತನ್ನ ಪತ್ನಿಗೂ ಪ್ರಯೋಗ ಮಾಡಿಸುವ ಸಂದರ್ಭದಲ್ಲಿ ಮಾಲಿನಿಯ ಮನಸ್ಸಿಗೆ ಆದ ಆಘಾತ ಮತ್ತು ಪ್ರಮಾದಗಳು ಎಷ್ಟು ದುರದೃಷ್ಟಕರ ಎಂಬುದು ತಿಳಿಯುತ್ತದೆ. ಹೆಣ್ಣು ಹೃದಯಕ್ಕೆ ಭ್ರೂಣವನ್ನು ಹತ್ಯೆ ಮಾಡುವುದಕ್ಕೆ ಮನಸ್ಸು ಬರುವುದಿಲ್ಲ. ಆದರೆ ಗಂಡನ ತಾಳಕ್ಕೆ ತಕ್ಕಂತೆ ಕುಣಿಯಬೇಕಾಗುತ್ತದೆ. ಅಬಾರ್ಷನ್ ಸಂದರ್ಭದಲ್ಲಿ ಮಾಲಿನಿಯ ಮನಸ್ಸಿನಲ್ಲಿ ಉಂಟಾದ ಭಾವನೆಗಳು:

**ಮಾಲಿನಿ:**...........(ಸ್ವಗತ) ಹೆಣ್ಣು ಶಿಶುವನ್ನು ಹುಟ್ಟಿದ ಕೂಡಲೇ ಕೊಲೆ ಮಾಡುವ ಸಮಾಜವೂ ನಮ್ಮ ದೇಶದಲ್ಲಿದೆಯೆಂದು ಕೇಳಿದ್ದೇನೆ. ಆದರೆ ಆ ಮಗು ಒಂಭತ್ತು ತಿಂಗಳವರೆಗೆ ತಾಯಿಯ ಹೊಟ್ಟೆಯಲ್ಲಾದರೂ ಬದುಕುವ ಅವಕಾಶ ಪಡೆದಿದೆ. ಆದರೆ ಈಗ ?..........ವಿಜ್ಞಾನದ ಪ್ರಗತಿಯಿಂದಾಗಿ ಹೆಣ್ಣು ಮಗು ತಾಯಿಯ ಹೊಟ್ಟೆಯೊಳಗೂ ಬದುಕುಳಿಯುವಂತಿಲ್ಲವಲ್ಲ ? ಓ..........ದೇವರೇ......... ಇದು ಎಂತಹ ಕ್ರೂರ ಜಗತ್ತು ! ಯಾವುದೋ ಒಂದು ಕ್ರೂರವಾದ ಒಳಸಂಚಿನಲ್ಲಿ ನಾನೂ ಬಾಗಿಯಾಗುತ್ತಿದ್ದೇನೆಯೇ ? ವಿಜ್ಞಾನದ ಪ್ರಗತಿಯಿಂದ ಒಳ್ಳೆಯದಕ್ಕೋಸ್ಕರ ಸದುಪಡಿಸಿಕೊಳ್ಳದೆ, ಇಂತಹ ಕರುಳು ಸಂಬಂಧವನ್ನೇ ಕ್ರೂರವಾಗಿ ಕೊಲ್ಲುವ ಸಂದರ್ಭಗಳು ಅಮಾನವೀಯವಾದದು. ಮಾಲಿನಿಗೆ ಅಬಾರ್ಷನ್ ಆದಾಗ ಆ

ಭ್ರೂಣ ಗಂಡು ಎಂದು ಗೊತ್ತಾದಾಗ ಗಂಡ ಹೆಂಡತಿ ಇಬ್ಬರಿಗೆ ಆದ ದುಃಖ ಮತ್ತು ಪ್ರಮಾದ ಅಷ್ಟಿಷ್ಟಲ್ಲ. ಆದರೂ ಗಂಡ ತನ್ನ ಆಸೆಯನ್ನೂ ಬಿಡದೆ ಗಂಡು ಮಗು ಬೇಕೆಂಬುದನ್ನು ವ್ಯಕ್ತಪಡಿಸಿದಾಗ ಮಾಲಿನಿ ಮಾನಸಿಕವಾಗಿ ಅಸ್ವಸ್ಥೆಯಾಗುತ್ತಾಳೆ. ಕೊನೆಗೆ ಮನಃಶಾಸ್ತ್ರಜ್ಞರ ಬಳಿ ಹೋಗಬೇಕಾಗುತ್ತದೆ. ಕೊನೆಗೆ ಡಾಕ್ಟರ್– ಮಧುಕರ್‌ಗೆ ನೋಡಿ ಮಿಸ್ಟರ್ ಮಧುಕರ್, ನೀವೂ ಅಷ್ಟೇ ಬದುಕು ಕೊಟ್ಟದನ್ನು ಸ್ವೀಕರಿಸಿ ನೆಮ್ಮದಿಯಿಂದ ಬಾಳಲು ಕಲಿಯಬೇಕು. ಅದು ಬಿಟ್ಟು ಇನ್ನೇನೊ ಬೇಕೆಂದು ಏನೇನೊ ಮಾಡಹೊರಟರೆ ಈ ರೀತಿ ಆಘಾತ, ನಿರಾಸೆಗಳಿಗೆ ತುತ್ತಾಗಿ ಮಾನಸಿಕ ಸ್ಥಿಮಿತವನ್ನೇ ಕಳೆದುಕೊಳ್ಳಬೇಕಾಗುತ್ತದೆ. 'ಹೆಣ್ಣಾಗಲಿ ಗಂಡಾಗಲಿ ಮಕ್ಕಳೆರಡೇ ಸಾಕು' ಎಂಬ ವಾಕ್ಯವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡುತ್ತಾರೆ.

ಹೆಣ್ಣು–ಗಂಡು ಎಂಬುದು ಮುಖ್ಯವಲ್ಲ, ಅವರವರ ಬದುಕಿನಲ್ಲಿ ಬಂದದ್ದನ್ನು ಸ್ವೀಕರಿಸಲು ಸಿದ್ಧರಿರಬೇಕು. ಸ್ವಲ್ಪ ವ್ಯತ್ಯಾಸವಾದರೂ ದಾಂಪತ್ಯ ಜೀವನವೇ ಒಡೆದು ಹೋಗುವ ಸಾಧ್ಯತೆಯಿರುತ್ತದೆ. ಲಿಂಗತಾರತಮ್ಯವಿಲ್ಲದೆ ಬದುಕಿದಾಗ ಕುಟುಂಬ ಸುಖೀಜೀವನದಿಂದ ಕೂಡಿರುತ್ತದೆ.

**ಹೀಗೊಂದು ಬದುಕು:** ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಮನುಷ್ಯ ಬದುಕು ಕಟ್ಟಿಕೊಳ್ಳುವುದು ಎಷ್ಟು ಕಷ್ಟ ಎಂಬುದು ಈ ನಾಟಕದ ಭಾಗವನ್ನು ಓದಿದಾಗ ಮನಸ್ಸು–ಕರುಳಿಗೆ ಚುರ್ ಎನ್ನುತ್ತದೆ. ಕಣ್ಣುಗಳಲ್ಲಿ ಕಂಬನಿ ತುಂಬಿ ಮಿಡಿಯುತ್ತದೆ. ಮುಸ್ಲಿಂ ಸಮುದಾಯದ ಒಂದು ಕುಟುಂಬದಲ್ಲಿ ನಾಲ್ಕು ಹೆಣ್ಣುಮಕ್ಕಳು ಫಾತಿಮಾ, ಜುಬೈದಾ, ಶಾಹಿನ, ಆಮಿನ ಹಾಗೂ ಚಿಕ್ಕ ಹುಡುಗ ಹಮೀದ್ ಮತ್ತು ತಾಯಿ–ತಂದೆ. ಹಾಗೆಯೇ ಮನೆಯ ಮಾಲೀಕ, ಸ್ನೇಹಿತೆ ಚಂದ್ರಾವತಿ ಪಾತ್ರಗಳು ಬರುತ್ತವೆ. ಇದೊಂದು ಕಾರ್ಮಿಕ ಕುಟುಂಬ. ವಾಸಿಸುವುದಕ್ಕೆ ಮನೆಯಿಲ್ಲದೆ ಬಾಡಿಗೆ ಮನೆಯಲ್ಲಿ ವಾಸ. ಮೊದಲು ಮಗಳು ಫಾತಿಮಾಳನ್ನು ಮದುವೆ ಮಾಡಿ ಅಷ್ಟಕ್ಕೆ ಸುಸ್ತಾಗಿ, ತಂದೆ ಬೇರೆ ಊರಿಗೆ ದುಡಿದು ಸಂಪಾದಿಸುವುದಕ್ಕೆ ಹೋಗಿರುತ್ತಾನೆ. ಇತ್ತ ಉಳಿದ ಮೂರು ಹೆಣ್ಣುಮಕ್ಕಳು, ಒಬ್ಬ ಹುಡುಗನನ್ನು ಸಾಕುವ ಜವಾಬ್ದಾರಿ ತಾಯಿಯದಾಗಿರುತ್ತದೆ. ಆ ಹೆಣ್ಣುಮಕ್ಕಳಿಗೆ ಓದುವ ಆಸೆಯಿದ್ದರೂ ಸಾಧ್ಯವಾಗದೇ ತಮ್ಮ ಬದುಕು ಕಟ್ಟಿಕೊಳ್ಳುವುದಕ್ಕೋಸ್ಕರ ಬೀಡಿಕಟ್ಟುವ ಕೆಲಸದಲ್ಲಿ ತೊಡಗಿರುತ್ತಾರೆ. ಒಂದು ದಿನ ದುಡಿಯುವುದನ್ನು ನಿಲ್ಲಿಸಿದರೆ ಉಪವಾಸವೇ ಗತಿ. ಅಷ್ಟೆಲ್ಲ ದುಡಿದರೂ ದಿನದ ಮೂರು ಹೊತ್ತು ಹೊಟ್ಟೆತುಂಬಾ ತಿನ್ನುವುದಕ್ಕೆ ಸಾಕಾಗುವುದಿಲ್ಲ. ಕೊನೆಯ ಹುಡುಗ ಶಾಲೆಯಿಂದ ಬಂದು ಹಸಿವು ತಿನ್ನುವುದಕ್ಕೆ ಏನಾದರೂ ಕೊಡಿ ಎಂದು ತಾಯಿಯನ್ನು ಕೇಳಿದಾಗ, ಆಕೆ ಅಸಹಾಯಕಳಾಗುವುದು ತಿಳಿಯುತ್ತದೆ. ಶಾಹಿನಾ ತನ್ನ ಸ್ನೇಹಿತೆ ಚಂದ್ರಾವತಿಗೆ ಹೇಳುವ ಸಂದರ್ಭ.

**ಶಾಹಿನಾ:** ನಮ್ಮ ಪರಿಸ್ಥಿತಿ ನಿನಗೆ ಗೊತ್ತಿಲ್ಲವಾ ಚಂದ್ರಾ ? ಈ ಕಡೆ ಮನೆಯವರು ಬಂದು ಮನೆಯೊಳಗೆ ಸೇರಿಕೊಂಡು ನಾವು ಮುಂದಿನ ಜಗಲಿಗೂ ಕಾಲಿಡದ ಹಾಗಾಗಿದೆ. ಅಕ್ಕನನ್ನು ಹೆರಿಗೆಗೆ ಕರೆದುಕೊಂಡು ಬರಲಿಲ್ಲಾಂತ ಭಾವನ ಮನೆಯವರ ತಗಾದೆ. ಮದುವೆಯ ಸಾಲ, ಅದರ ಬಡ್ಡಿ, ಅಂತ ನಾವು ದುಡಿದದ್ದರಲ್ಲಿ ಅರ್ಧಹೋಗುತ್ತದೆ. ಉಮ್ಮಾ ಎಷ್ಟೂಂತ ಸಹಿಸುವುದು ?

ಮನೆಯ ಮಾಲೀಕ ಮನೆ ಖಾಲಿ ಮಾಡಿಸುವುದಕ್ಕೆ ಒತ್ತಡ, ಅಕ್ಕನನ್ನು ಹೆರಿಗೆಗೆ ಕರೆದುಕೊಂಡು ಬನ್ನಿ ಎಂದು ಅತ್ತೆಯ ತಗಾದೆ, ಮದುವೆಯ ಸಾಲ, ಅದಕ್ಕೆ ಬಡ್ಡಿ, ಬಾಡಿಗೆ, ಮನೆಯ ಖರ್ಚು, ಬೆಳೆದ ಹೆಣ್ಣು ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳುವ ಜವಾಬ್ದಾರಿ ಇವೆಲ್ಲವನ್ನೂ ಅಮ್ಮ ಎಷ್ಟೂಂತ ಸಹಿಸಿಕೊಂಡಾರು ಎಂಬ ವ್ಯಥೆ ಮಕ್ಕಳಲ್ಲಿ ವ್ಯಕ್ತವಾಗಿದೆ.

ಚಿಕ್ಕ ಹುಡುಗ ಹಮೀದ್‌ನನ್ನು ತನ್ನ ತಂದೆ ಇರುವ ಸ್ಥಳಕ್ಕೆ ವಿಳಾಸದ ಚೀಟಿಕೊಟ್ಟು ಬಸ್‌ನಲ್ಲಿ ಕಳಿಸುವ ಸಂದರ್ಭವಂತೂ ಇನ್ನೂ ನೋವನ್ನು ತರುತ್ತದೆ. ಆದರೆ ತಂದೆ ಇರುವ ಸ್ಥಳದಲ್ಲಿ ಕೋಮುಗಲಭೆಯುಂಟಾಗಿ ಅನೇಕ ಮನೆ, ಅಂಗಡಿಗಳು ಜನರೂ ಸೇರಿದಂತೆ ಅಗ್ನಿಗೆ ಆಹುತಿಯುಂಟಾಗಿರುವ ವಿಷಯವನ್ನು ತಿಳಿದಾಗ, ಈ ಕುಟುಂಬದವರಿಗೆ ಆಘಾತವುಂಟಾಗುತ್ತದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಬದುಕು ಎಂತೆಂತಹ ಕಷ್ಟಕೋಟಲೆಗಳು, ದುಃಖ ದುಮ್ಮಾನಗಳನ್ನು ಸಹಿಸಿಕೊಂಡು ಮಾನಸಿಕವಾಗಿ ದಹಿಸಿಹೋಗಿರುತ್ತಾರೆ ಎಂಬುದು ಇಂತಹ ದುರಂತ ಘಟನೆಗಳ ಮೂಲಕ ತಿಳಿಯುತ್ತದೆ. ಶ್ರೀಮಂತ ವ್ಯಕ್ತಿಗಳು, ಆಡಳಿತ ನಡೆಸುವವರಿಗೆ ಇಂತಹ ಕ್ಲಿಷ್ಟಕರವಾದ ಬದುಕು ಇರುತ್ತದೆ ಎಂಬುದು ಅವರ ಅನುಭವಕ್ಕೆ ಬಂದಿರುವುದಿಲ್ಲ. ನೇರವಾಗಿ ನೋಡಿದರೂ ಅದು ಅರ್ಥವಾಗುವುದಿಲ್ಲ.

**ಕೊಳಗೇರಿ:** ನಾಗಪ್ಪ, ಗಿರಿಜಮ್ಮ ದಂಪತಿಗಳು ತಮ್ಮ ಮಗಳು ಲತಾಗಳನ್ನು ಸುರೇಶನಿಗೆ ಕೊಟ್ಟು ಮದುವೆ ಮಾಡಿ, ಹಳ್ಳಿಯಲ್ಲಿ ವಾಸವಿರುತ್ತಾರೆ, ಅಳಿಯ ಸುರೇಶ ಮತ್ತು ಲತಾ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ಈ ಎರಡು ಪ್ರದೇಶದಲ್ಲಿ ಇವೆರಡು ಕುಟುಂಬಗಳು ನೆಲೆಸಿರುವ ಹಿನ್ನಲೆಯಲ್ಲಿ ಆಯಾಯ ಪ್ರದೇಶ, ಜನರ ಬದುಕಿನ ಬಾಹ್ಯಾಂತರಿಕವಾದ ಚಿತ್ರಣವನ್ನು 'ಕೊಳಗೇರಿ' ಭಾಗದಲ್ಲಿ ಬಹಳ ಅರ್ಥವತ್ತಾಗಿ ಕಥಾವಸ್ತುವನ್ನು ಹೆಣೆದಿದ್ದಾರೆ. ಹಳ್ಳಿಯಲ್ಲಿ ಸುಂದರವಾದ ವಿಶಾಲ ವಾತಾವರಣ, ನೈಸರ್ಗಿಕವಾದ ಗಾಳಿ, ಬೆಳಕು, ಇವೆಲ್ಲ ಸಿಗುತ್ತವೆ. ಆದರೆ ನಗರಪ್ರದೇಶದಲ್ಲಿ ಒಂದೊಂದು ಮನೆಗಳು ಒಂದಕ್ಕೊಂದು ಅಂಟಿಕೊಂಡಂತೆ ಉಸಿರುಗಟ್ಟುವ ವಾತಾವರಣದಲ್ಲಿ ಜನರು ಬದುಕುತ್ತಿರುವುದು ದುರದೃಷ್ಟಕರವಾದುದು. ಗಿರಿಜಮ್ಮ ಗರ್ಭಿಣಿ ಮಗಳ ಆರೈಕೆಗೋಸ್ಕರ ಬೆಂಗಳೂರಿಗೆ ಕಾಲಿಟ್ಟಾಗ ಆಕೆಗಾದ ಅನುಭವ, ಅದಕ್ಕೆ ಅಳಿಯ ನಗರದ ಬದುಕಿನ ಚಿತ್ರಣವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

**ಅಳಿಯ:** ಇಲ್ಲಿ ಎಲ್ಲವೂ ಹೀಗೆ ಖಾಸಗಿಬದುಕು ಎಂಬುದೇ ಇಲ್ಲ. ಎಲ್ಲವೂ ಬಟಾ ಬಯಲು. ಆದರೂ ಒಬ್ಬರಿಗೊಬ್ಬರು ಪರಿಚಯವೇ ಇಲ್ಲವೆಂಬಂತಹ ನಟನೆ. ಮುಖಗಳಿಗಿಂತ ಮುಖವಾಡಗಳೇ ಜಾಸ್ತಿ............

ಅಳಿಯ–ಮಗಳು ವಸತಿಗೃಹದಲ್ಲಿ ವಾಸವಿರುವಲ್ಲಿಗೆ ಬರುತ್ತಾರೆ. ಎದುರಿನ ಮನೆಯಲ್ಲಿ ಹೆಂಗಸರೇ ಕಾಣಿಸುತ್ತಿಲ್ಲವಲ್ಲ ? ಊರಿಗೆ ಹೋಗಿದ್ದಾರಾ ? ಎಂದು ಗಿರಿಜಮ್ಮ ಮಗಳನ್ನು ಕೇಳಿದಾಗ, ಆಕೆ ಊರಲ್ಲಿ ಮಾತ್ರವಲ್ಲ; ಈಗ ಆತನ ಬದುಕಿನಲ್ಲಿಯೇ ಇಲ್ಲ. ಇವನ ದುರ್ಬುದ್ಧಿಯಿಂದ ಬೇಸತ್ತು ಈತನಿಂದ ವಿಚ್ಛೇದನ ಪಡೆದುಕೊಂಡಿದ್ದಾಳಂತೆ. ಹಾಳಾದವನು! ಎಂದು ಕೋಪ, ಅಪಹನೆಯಿಂದ ವ್ಯಕ್ತಪಡಿಸುವುದು ಕಂಡುಬರುತ್ತದೆ. ಗಿರಿಜಮ್ಮ ರಾತ್ರಿಯ ಸಮಯದಲ್ಲಿ ನಿದ್ರಿಸುವಾಗ ಹೊರಗೆ ನಾಯಿಯ ಬೊಗಳುವಿಕೆ ಮತ್ತು ಹೆಣ್ಣು ದನಿಯೊಂದು ಸಣ್ಣಗೆ ಅಳುವ ಶಬ್ದ ಕೇಳಿಸುತ್ತದೆ. ಎಚ್ಚೆತ್ತ ಆಕೆ ಕಿಟಕಿ ತೆರೆದು ಗಮನಿಸಿದಾಗ ಮುಂದಿನ ಮನೆಯ ವ್ಯಕ್ತಿಯ ಅವಾಂತರಗಳು ಎಷ್ಟು ಕ್ರೂರವಾಗಿತ್ತು ಎಂಬುದನ್ನು ತಿಳಿದಾಗ, ನಗರ ಜೀವನ ಮನುಷ್ಯತ್ವನ್ನೇ ಕಳೆದುಕೊಂಡು ವರ್ತಿಸುತ್ತಿರುವುದನ್ನು ನೋಡಿ ಅಸಹ್ಯವಾಗುತ್ತದೆ. ಅದರಲ್ಲೂ ಹೆಣ್ಣು ತನ್ನ ಬದುಕಿಗೋಸ್ಕರ ವೇಶ್ಯಾವೃತ್ತಿಯಲ್ಲಿ ತೊಡಗುವುದು, ಇದಕ್ಕೆ ಗಂಡಸರೇ ಕಾರಣವಾಗಿ ಶೋಷಣೆ ಮಾಡುವ ಸಂದರ್ಭವನ್ನು ಗಮನಿಸಿದಾಗ ಈ ಮನುಷ್ಯ ಎಂತಹ ಕ್ರೂರಿ ಎಂಬುದು ಮನನವಾಗುತ್ತದೆ.

**ಗಂಡಸಿನ ಧ್ವನಿ:** (ಗಡುಸಾಗಿ) ಕೂಡಲೇ ಹೊರಡು. ಇಲ್ಲವಾದರೇ ನೀನು ಹುಟ್ಟಲಿಲ್ಲಾಂತನ್ನಿಸಿ ಬಿಡ್ತೇನೆ.

**ಹೆಂಗಸು:** (ಅಳು ನಿಲ್ಲಿಸಿ ದಿಟ್ಟತನದಿಂದ) ನನಗೆ ಮೊದಲೇ ಒಪ್ಪಿಕೊಂಡಷ್ಟು ಕೊಡಿ. ನೀವೊಬ್ಬರಲ್ಲ; ನಿಮ್ಮ ಗೆಳೆಯರೂ ಇದ್ದಾರಲ್ಲವಾ ! ನನಗೆ ಬರಬೇಕಾದ ಹಣ ಬರದೆ ನಾನು ಇಲ್ಲಿಂದ ಕದಲಲಾರೆ ! (ಟಪ್, ಟಪ್, ಟಪ್, ಗುದ್ದುಗಳ ಶಬ್ದದೊಡನೆ ಗಂಡಸಿನ ಮಾತುಗಳು)

**ಹೆಂಗಸು** : (ಗೋಗರೆಯುವಂತೆ) ನೀವು ಇನ್ನೂರು ಅಂತ ಹೇಳಿದ್ದಿರಿ. ನೂರೈವತ್ತಾದರೂ ಕೊಡಿ.

**ಗಂಡಸು** : ಈ ಹೆಂಗಸರೆಂದರೆ ಹೀಗೆಯೇ. ಎಷ್ಟು ದೊರತರೂ ತೃಪ್ತಿ ಎಂಬುದಿಲ್ಲ. ನಮ್ಮ ಹಿಂಡಿ ಹಿಪ್ಪೆ ಮಾಡ್ತಾರೆ !

**ಹೆಂಗಸು** : (ಜೋರಾಗಿ) ಯಾರು ಯಾರನ್ನು ಹಿಂಡುವುದು ? ಹೆಂಗಸರು ಗಂಡಸರನ್ನು ಹಿಂಡುವುದೇ ? ನನ್ನನ್ನು ಮದುವೆಯಾಗ್ತೇನೆಂತ ನಂಬಿಸಿ ಈ ಸ್ಥಿತಿಗೆ ದೂಡಿದವರೇ ನೀವು; ಹುಂ...ಹಿಂಡಿ ಹಿಪ್ಪೆ ಮಾಡುವುದು ಹೆಂಗಸರಂತೆ !

**ಗಿರಿಜಮ್ಮ** : (ಸ್ವಗತ) ಅಯ್ಯೋ ದೇವರೇ, ಈ ಗಂಡಸರು ಅವಳ ಬಾಯನ್ನೇ ಒತ್ತಿಬಿಟ್ಟರಲ್ಲಾ ? ಇವರೇನು ರಾಕ್ಷಸರೋ ಮನುಷ್ಯರೋ ? ಹೇಳಿದಂತೆಯೇ ಆಕೆಯನ್ನು ಕೊಂದೇ ಬಿಡ್ತಾರಾ ? ರಾಮ ರಾಮಾ, ಎಂತಹ ಕಲಿಯುಗ ಇದು! ಆ ಪಕ್ಕದ ಮನೆಯವನಾದರೂ ಎಂತಹವನು ?ಎಲ್ಲ ನೋಡ್ಕೊಂಡು ಕಿಟಕಿ ಮುಚ್ಚಿಕೊಂಡನಲ್ಲಾ !

ಗಿರಿಜಮ್ಮ ನಗರದಲ್ಲಿ ನಡೆಯುವ ಇಂತಹ ಘಟನೆಗಳನ್ನು ನೋಡಿ ತನ್ನ ಸಂಸಾರದ ಬಗ್ಗೆಯೇ ಆತಂಕವುಟಾಗುತ್ತದೆ. ಹುಣಸೆಮರಕ್ಕೆ ಪ್ರಾಯವಾದರೂ ಹುಳಿಯೇನೂ ಕಮ್ಮಿಯಾಗುವುದಿಲ್ಲ. ಅಲ್ಲವಾ ? ಎಂದು ಯೋಚಿಸಿ ಮಗಳ ಮನೆಗೆ ಬಂದಿರುವ ಗಿರಿಜಮ್ಮ ತಕ್ಷಣ ತನ್ನ ಗಂಡ ಒಬ್ಬರನ್ನೇ ಮನೆಯಲ್ಲಿ ಬಿಡಬಾರದೆಂದು ಹೊರಡುತ್ತಾಳೆ. ಹಾಗೆಯೇ ಮಗಳು ಲತಾ ಕೂಡ ಹೆರಿಗೆಗೆ ತವರು ಮನೆಗೆ ಹೋಗದೆ ತನ್ನ ಗಂಡನ ಜೊತೆಯಲ್ಲಿರುವುದು ಕಂಡುಬರುತ್ತದೆ. ಯಾವ್ಯಾವ ಸಂದರ್ಭದಲ್ಲಿ ಗಂಡಸರ ಮನೋಭಾವನೆಗಳು ಬದಲಾಗಿ ಸಾಂಸಾರಿಕ ಬದುಕಿಗೆ ಸಂಚಕಾರ ಬರುತ್ತದೋ ಎಂದು ಹೆಂಗಸರು ಆತಂಕದಿಂದ ತುಂಬಾ ಎಚ್ಚರವಹಿಸುವುದು 'ಕೊಳಗೇರಿ' ಭಾಗದಲ್ಲಿ ಪ್ರತಿಬಿಂಬತವಾಗಿದೆ. ಕೊಳಗೇರಿ ಎಂದರೆ ವಾಸಮಾಡುವ ಸ್ಥಳ ಕೊಳಕಾಗಿರುವುದು ಮಾತ್ರವಲ್ಲ; ಮನುಷ್ಯನ ಹೃದಯ, ಮನಸ್ಸು ಕೊಳಕಾಗಿರುವುದು ಎಂಬ ವಿಷಯವನ್ನು ಬಹಳ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಸಾರಾ ಅಬೂಬಕ್ಕರ್ ಅವರ ಈ ಏಳು ನಾಟಕಗಳು ಪ್ರಸ್ತುತ ಘಟನೆಗಳನ್ನು ಒಳಗೊಂಡ ಸ್ತ್ರೀಶೋಷಣೆಯ ಚಿತ್ರಣವನ್ನು ತುಂಬಾ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಸಮಾಜದಲ್ಲಿ ಹೆಣ್ಣು ಕಷ್ಟಕೋಟಲೆ, ದುಃಖ ದುಮ್ಮಾನಗಳೆಲ್ಲವನ್ನೂ ಮೆಟ್ಟಿನಿಂತು ತನ್ನ ಬದುಕಿನಲ್ಲಿ ಸಾಧನೆ ಮಾಡಿ ತೋರಿಸುವ ಛಲಗಾರಿಕೆಯ ಸ್ತ್ರೀಸಂವೇದನಾ ಶಕ್ತಿಯನ್ನು ಪ್ರತಿಬಿಂಬಿಸಿದ್ದಾರೆ. ಕುಟುಂಬದಲ್ಲಿ ಹೆಣ್ಣು ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲವೆಂದರೆ ಅದು ಸುಖೀ ಕುಟುಂಬವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಶಿಕ್ಷಣ, ಸಂಸ್ಕೃತಿ, ನಾಗರಿಕತೆ, ಪರಂಪರೆ, ಸಮಾಜ– ಇವೆಲ್ಲಾ ಬೆಳೆಯಬೇಕಾದರೆ ಹೆಣ್ಣಿನ ಪಾತ್ರ ಪ್ರಧಾನವಾದುದು. ಮಹಿಳೆಯ ಮನಸ್ಸು ಎಷ್ಟು ಎತ್ತರವಾದುದು ಹಾಗೂ ಜನರೆಲ್ಲರ ಮನಸ್ಸು, ಹೃದಯ, ಕರುಳನ್ನು ಮುಟ್ಟುವಂತೆ ಅತ್ಯಂತ ಗಂಭೀರವಾಗಿ ನಡೆದುಕೊಳ್ಳುತ್ತಾಳೆ ಎಂಬುದನ್ನು ಈ ನಾಟಕಗಳಲ್ಲಿ ಸಾಮಾಜಿಕ ಹಾಗೂ ವೈಚಾರಿಕ ನೆಲೆಗಟ್ಟಿನಲ್ಲಿ ವ್ಯಕ್ತಪಡಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ತೇಲಾಡುವ ಮೋಡಗಳು : ಸಾರಾ ಅಬೂಬಕ್ಕರ್, ೨೦೦೯, ಎಬಿಎಚ್ ಪ್ರಕಾಶನ, ೭೭, ರಾಮರಾವ್ ಬಡಾವಣೆ, ಬನಶಂಕರಿ ಮೂರನೆ ಹಂತ, ಬೆಂಗಳೂರು–೫೬೦ ೦೮೫